ಸಂಪಾದಕ:ಎಸ್.ಕೆ.ಒಡೆಯರ್ ಸ್ವಾಭಿಮಾನಿಗಳಪತ್ರಿಕೆ www.pavitrapraja.com

# ಪವಿತ್ರ ಪ್ರಜಾ

PAVITRAPRAJA Daily RNI:KARKAN: 2007/22780 ದಿನಪತ್ರಿಕೆ

e-mail:pavitrapraja@gmail.com KA/SK/CTA-806/21-23 Davanagere 9141920642

ಸಂಪುಟ:18 ಸಂಚಿಕೆ: 220 ದಿನಾಂಕ:09–07–2024 ಮಂಗಳವಾರ ಪುಟ:4 ರೂ.2–00 ಉಪಸಂಪಾದಕರು: ಸುಪ್ರಿತ ಎಸ್. ಒಡೆಯರ್ ಎಂಬಿಎ Vol:18 Issuse:220 Date:09-07-2024 Thuesday page:4 Rs:2-00 subEditor: Supritha Wadeyar

# ಜಿಲ್ಲಾಧಿಕಾರಿ ಮಹಾರಾಜನಲ್ಲ

## ಜನಸಾಮಾನ್ಯರ ಕೆಲಸ ನಿರ್ಲಕ್ಷಿಸಿದರೆ ಸಹಿಸಲ್ಲ, ಅಧಿಕಾರಿಗಳಿಗೆ ಸಿಎಂ ಖಡಕ್ ಎಚ್ಚರಿಕೆ



ಬೆಂಗಳೂರು, ಜು. 8–

ಜಿಲ್ಲಾಧಿಕಾರಿಗಳು ಎಂದರೆ ಮಹಾರಾಜರಲ್ಲ, ನಾವು ಮಹಾರಾಜರು ಎನ್ನುವ ಮನೋಭಾವ ಬಿಟ್ಟು ಬಿಡಿ. ಈ ರೀತಿಯ ಮನೋಭಾವ ಇದ್ದ–ರೆ ಜನಸೇವೆ ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಚಾಟಿ ಬೀಸಿದರು. ಜನಸಾಮಾನ್ಯರ ಕೆಲಸದಲ್ಲಿ ಉದಾಸೀನ, ನಿರ್ಲಕ್ಷ್ಯವನ್ನು ನಾನು ಸಹಿಸಲ್ಲ, ಸರಿಯಾಗಿ ಕೆಲಸ ಮಾಡದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುತ್ತೇನೆ ಎಂದು ಅವರು ಖಡಕ್ ಎಚ್ಚರಿಕೆ ನೀಡಿದರು.ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಇಂದು ನಡೆದ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು, ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕೆಲಸ ಮಾಡದ ಅಧಿಕಾರಿಗಳನ್ನು ತಮ್ಮದೇ ಆದ ದಾಟಿಯಲ್ಲಿ ತರಾಟೆಗೆ ತೆಗೆದು–ಕೊಂಡು ಉದಾಸೀನ, ನಿರ್ಲಕ್ಷ್ಯ, ಕರ್ತವ್ಯಲೋಪಕ್ಕೆ ಕೆಳಹಂತದ ಅಧಿಕಾರಿಗಳ ವಿರುದ್ಧ ಮಾತ್ರವಲ್ಲ, ಹಿರಿಯ ಅಧಿಕಾರಿಗಳನ್ನು ಹೊಣೆ ಮಾಡಿ ಕ್ರಮ ಕೈಗೊಳ್ಳುತ್ತೇನೆ ಎಂದು ಗುಡುಗಿದರು. ರಾಜಕಾರಣಿಗಳು ಮತ್ತು ಅಧಿಕಾರಿಗಳು ಇಬ್ಬರು ಜನಸೇವಕರು ಎಂಬುದನ್ನು ನೆನಪಿನಲ್ಲಿಟ್ಟುಕೊಂಡು ಜನಸೇವೆ ಮಾಡಬೇಕು ಎಂದು ಹೇಳಿದ ಅವರು, ಜಿಲ್ಲಾಧಿಕಾರಿಗಳಿಗೆ ಮಹಾರಾಜರು ಎನ್ನುವ ಭಾವನೆ ಇದ್ದರೆ, ಅಭಿವೃದ್ಧಿ ಮತ್ತು ಪ್ರಗತಿ ಸಾಧ್ಯವಿಲ್ಲ ಎಂದರು.ಸರ್ಕಾರದ ಕಾರ್ಯಕ್ರಮಗಳು, ಯೋಜನೆಗಳು ಜನಸಾಮಾನ್ಯರಿಗೆ ತಲುಪಲು ಅಧಿಕಾರಿಗಳು ಕ್ರಿಯಾಶೀಲತೆಯಿಂದ, ಸಮನ್ವಯತೆಯಿಂದ ಕೆಲಸ ಮಾಡಬೇಕು. ಆಗ ಮಾತ್ರ ಜನಕಲ್ಯಾಣ ಸಾಧ್ಯ ಎಂದು ಹೇಳಿದರು. ಜನಸಂಪರ್ಕ, ಜನಸ್ಪಂದನ ಸಭೆಯಲ್ಲಿ 15 ರಿಂದ 20 ಸಾವಿರ ಅರ್ಜಿಗಳು ಬರುತ್ತವೆ. ನೀವು ಸ್ಥಳೀಯವಾಗಿ ಸರಿಯಾಗಿ –3ನೇ ಪುಟಕ್ಕೆ



ಜಗಪ್ರಸಿದ್ಧ ದೇವಾಲಯಗಳಲ್ಲಿ ಒಂದಾದ ಶ್ರೀ ಪುರಿ ಜಗನ್ನಾಥ ಸ್ವಾಮಿ ರಥೋತ್ಸವ ಅದ್ದೂರಿಯಿಂದ ಜರುಗಿತು. ರಥೋತ್ಸವದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ದರ್ಶನ ಪಡೆದು ಪುನೀತರಾದರು.

## ಚರಂಡಿ ಅಸ್ವಚ್ಛತೆಯಿಂದ ನಾಗರೀಕರಲ್ಲಿ ಅನಾರೋಗ್ಯ : ಕಣ್ಮುಚ್ಚಿ ಕುಳಿತ ಶಿವಮೊಗ್ಗ ಪಾಲಿಕೆ ಆಡಳಿತ!



ಶಿವಮೊಗ್ಗ:–

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿ 5 ನೇ ವಾರ್ಡ್ ಗಾಡಿಕೊಪ್ಪದ ಆಟೋ ಸ್ಟ್ಯಾಂಡ್ ಎದುರಿನ ಮೈಸೂರು ಬೀದಿಯಲ್ಲಿ ಚರಂಡಿ ಅಸ್ವಚ್ಛತೆಯಿಂದ ಸೊಳ್ಳೆ, ಕ್ರಿಮಿಕೀಟಗಳ ಹಾವಳಿ ವಿಪರೀತವಾಗಿದೆ. ನಾಗರೀಕರು ಅನಾರೋಗ್ಯಕ್ಕೆ ತುತ್ತಾಗುವಂತಾಗಿದೆ ಎಂದು ಸ್ಥಳೀಯರು ದೂರಿದ್ದಾರೆ. ಚರಂಡಿಯಲ್ಲಿ ಭಾರೀ ಪ್ರಮಾಣದ ಮಣ್ಣು ತುಂಬಿ ಮುಚ್ಚಿ ಹೋಗಿದೆ. ಕೊಳಚೆ ನೀರು ಮುಂದಕ್ಕೆ ಹರಿದು ಹೋಗುತ್ತಿಲ್ಲ. ಕಳೆದ ಕೆಲ ತಿಂಗಳುಗಳಿಂದ ಈ ದುಃಸ್ಥಿತಿಯಿದೆ. ದುರ್ನಾತ ಬೀರುತ್ತಿದೆ. ಚರಂಡಿ ಸ್ವಚ್ಛತೆಗೆ ಕ್ರಮಕೈಗೊಳ್ಳುವಂತೆ ಈಗಾಗಲೇ ಮಹಾನಗರ ಪಾಲಿಕೆ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದರೂ ಇಲ್ಲಿಯವರೆಗೂ ಯಾವುದೇ ಕ್ರಮಕೈಗೊಂಡಿಲ್ಲ.ಸಂಪೂರ್ಣ ನಿರ್ಲಕ್ಷ್ಯ ವಹಿಸಿದ್ದಾರೆ. ಆಡಳಿತದ ಬೇಜವಾಬ್ದಾರಿ, ನಿರ್ಲಕ್ಷ್ಯ ಧೋರಣೆಯಿಂದ ನಾಗರೀಕರು ಅನಾರೋಗ್ಯಕ್ಕೆ ತುತ್ತಾಗುವಂತಾಗಿದೆ. ಪಾಲಿಕೆ ಆಡಳಿತದಲ್ಲಿ ಹೇಳುವವರು, ಕೇಳುವವರು ಯಾರು ಇಲ್ಲದಂತಾಗಿದೆ' ಎಂದು ಸ್ಥಳೀಯ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸುತ್ತಾರೆ. ಮಳೆಗಾಲವಾಗಿರುವುದರಿಂದ ನಾನಾ ರೋಗಗಳು ಕಂಡುಬರುತ್ತಿವೆ. ಡೆಂಗ್ಯೂ ಜ್ವರ ಹೆಚ್ಚಾಗುತ್ತಿದೆ. ಡೆಂಗ್ಯೂ –3ನೇ ಪುಟಕ್ಕೆ

## ಸಮರ್ಪಣಾ ಭಾವದಿಂದ ವೃತ್ತಿಯಲ್ಲಿ ಯಶಸ್ಸು



ಚಿತ್ರದುರ್ಗ:–

ಸಮರ್ಪಣಾಭಾವದಿಂದ ವೃತ್ತಿ ಜೀವನದಲ್ಲಿ ಯಶಸ್ಸು ಪಡೆಯಲು ಸಾಧ್ಯವಾಗುತ್ತದೆ ಎಂದು ಡಯಟ್ ಪ್ರಾಚಾರ್ಯ ಎಂ.ನಾಸಿರುದ್ದೀನ್ ಹೇಳಿದರು. ನಗರದ ಡಯಟ್‌ನಲ್ಲಿ ನಿವೃತ್ತ ಉಪನ್ಯಾಸಕ ಎನ್.ಮಂಜುನಾಥ್‌ಗೆ ಆಯೋಜಿಸಿದ್ದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ನಮ್ಮ ವೃತ್ತಿಯನ್ನು ಪ್ರೀತಿಸಬೇಕು. ಶ್ರದ್ಧೆ, ಸಮರ್ಪಣಾಭಾವದಿಂದ ಕೆಲಸ ಮಾಡಿದಾಗ ಗೌರವ ಲಭಿಸುತ್ತದೆ. –3ನೇ ಪುಟಕ್ಕೆ

## ಭಾರತ್ ಅಕ್ಕಿ ಸ್ಥಗಿತ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ



ದಾವಣಗೆರೆ:–

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಭಾರತ್ ಅಕ್ಕಿ ಯೋಜನೆ ನೀಡುತ್ತಿರುವುದನ್ನು ರದ್ದುಪಡಿಸಿದೆ ಎಂದು ಆರೋಪಿಸಿ ಜಿಲ್ಲಾ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಮಹಾನಗರ ಪಾಲಿಕೆ ಆವರಣದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆ ಎದುರು ಪ್ರತಿಭಟನೆ ನಡೆಸಿದರು.ಈ ವೇಳೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ ಶೆಟ್ಟಿ ಮಾತನಾಡಿಲೋಕಸಭಾ ಚುನಾವಣೆ ಮೂರು ತಿಂಗಳು ಇರುವಾಗ ಮತಗಳ ಆಸೆಗಾಗಿ ಕೇಂದ್ರ ಸರ್ಕಾರ ಭಾರತ್ ಅಕ್ಕಿ ಯೋಜನೆ ಜಾರಿಗೆ ತಂದಿತ್ತು. ಚುನಾವಣೆಯಲ್ಲಿ ನಿರೀಕ್ಷಿತ ಕ್ಷೇತ್ರದಲ್ಲಿ ಗೆಲುವು ಸಿಗಲಿಲ್ಲ ಎಂಬ ಕಾರಣ–ಕ್ಕೆ ಯಾವುದೇ ಸುಳಿವು ನೀಡದೆ ದಿಢೀರ್‌ನೆ ಭಾರತ್ ಅಕ್ಕಿ ಯೋಜನೆ ನಿಲ್ಲಿಸಿರುವುದು ಅತ್ಯಂತ ಖಂಡನೀಯ ಮತ್ತು ಜನ ವಿರೋಧಿ ಕ್ರಮ. ಕೂಡಲೇ –3ನೇ ಪುಟಕ್ಕೆ

## ತರಬೇತಿಯಿಲ್ಲದ ಶಿಕ್ಷಕರು,ಉಪನ್ಯಾಸಕರ ನೇಮಕ ಖಾಸಗಿ ಶಾಲಾ ಕಾಲೇಜಿನ ಆಡಳಿತ ವೈಖರಿಗೆ ಖಂಡನೆ



ದಾವಣಗೆರೆ:–

ಖಾಸಗಿ ಶಾಲಾ ಕಾಲೇಜುಗಳಲ್ಲಿ ಶಿಕ್ಷಕರು, ಉಪನ್ಯಾಸಕರು ಮತ್ತು ಪ್ರಾಂಶುಪಾಲರನ್ನು ನೇಮಕಾತಿ ಮಾಡುವ ಸಮಯದಲ್ಲಿ ಸಮಗ್ರ ದಾಖಲಾತಿಗಳನ್ನು ಪರಿಶೀಲನೆ ಮಾಡಬೇಕೆಂದು ಅಖಿಲ ಭಾರತ ಹಿಂದೂ ಮಹಾಸಭಾದ ಜಿಲ್ಲಾಧ್ಯಕ್ಷ ಜೆ.ಅರುಣ್ ಕುಮಾರ್ ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾತನಾಡಿದ ಅವರು ಖಾಸಗಿ ಶಾಲಾ ಮತ್ತು ಕಾಲೇಜುಗಳಲ್ಲಿ ಶಿಕ್ಷಕರನ್ನು, ಉಪನ್ಯಾಸಕರನ್ನು ಮತ್ತು ಪ್ರಾಂಶುಪಾಲರುಗಳನ್ನು

ನೇಮಕಾತಿ ಮಾಡುವಾಗ ಯಾವುದೇ ವಿದ್ಯಾರ್ಹತೆ ಹಾಗೂ ಅನುಭವವಿಲ್ಲದವರನ್ನು ಆಡಳಿತ ಮಂಡಳಿಯವರು ನೇಮಕಾತಿ ಮಾಡುತ್ತಿದ್ದಾರೆ. ಅಂತಹ ವ್ಯಕ್ತಿಗಳು ತಮ್ಮ ಶೈಕ್ಷಣಿಕ ಕಾರ್ಯ ನಿರ್ವಹಣೆಯನ್ನು ಅವೈಜ್ಞಾನಿಕವಾಗಿ ನಿರ್ವಹಿಸುತ್ತಿದ್ದಾರೆ.

ಹಾಗೂ ವಿದ್ಯಾರ್ಥಿಗಳ, ಶಿಕ್ಷಕರ ಹಾಗೂ ಪೋಷಕರ ಉಪನ್ಯಾಸಕರ ಮೇಲೆ ತಮ್ಮದೇ ಆದ ನಿರಂಕುಶ ಆಡಳಿತ ನಡೆಸುತ್ತಿದ್ದಾರೆ. ಇದರ ಜೊತೆಗೆ ಶೈಕ್ಷಣಿಕ ಚಟುವಟಿಕೆಗಳಲ್ಲಿ ರಾಜಕೀಯ ಮಾಡಿ ಶಿಕ್ಷಣ ವ್ಯವಸ್ಥೆಯನ್ನು ಹದಗೆಡಿಸುತ್ತಿದ್ದಾರೆ. ಹಾಗೂ ಶಾಲಾ ನಿರ್ವಹಣೆಯಲ್ಲಿ ಮುಖ್ಯವಾಗಿರುವ ಶಾಲಾ ದಾಖಲೆಗಳನ್ನು ತಮ್ಮ ಮನಸ್ಸಿಗೆ ಬಂದಂತೆ ನಿರ್ವಹಣೆ ಮಾಡುತ್ತಿದ್ದಾರೆ. ಇವರು ಆಡಳಿತ ಮಂಡಳಿಯವರಿಗೆ ತಮಗೆ

ಬೇಕಾದ ದಾರಿಯಲ್ಲಿ ಅವರನ್ನು ಬಳಸಿ ಕೊಳ್ಳುತ್ತಿದ್ದಾರೆಂದು –3ನೇ ಪುಟಕ್ಕೆ

## ಜಗಳೂರು; ಕೆ.ಎಸ್. ಆರ್.ಟಿ.ಸಿ ಅಶ್ವಮೇಧ ಬಸ್ ಸಂಚಾರ: ಶಾಸಕ ಬಿ.ದೇವೇಂದ್ರಪ್ಪ



ಜಗಳೂರು:–

ಪಟ್ಟಣದ ಹಳೇ ಬಸ್ ನಿಲ್ದಾಣದಲ್ಲಿ ಕೆ.ಎಸ್. ಆರ್.ಟಿ.ಸಿ ಅಶ್ವಮೇಧ ಬಸ್ ಗೆ ಚಿಕ್ಕಮ್ಮನಹಟ್ಟಿ ಬಿ.ದೇವೇಂದ್ರ ಪ್ಪ ಹಸಿರು ನಿಶಾನೆ ತೋರಿಸುವ ಮೂಲಕ ಇಂದು ಬೆಳಿಗ್ಗೆ ಚಾಲನೆ ನೀಡಿದರು ನಂತರ ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ,ರಾಜ್ಯ ವ್ಯಾಪಿ ಕೆಎಸ್ ಆರ್ ಟಿಸಿ ನಿಗಮದಡಿ ಸರ್ಕಾರಿ ಬಸ್ ಸೌಲಭ್ಯ ಉತ್ತಮ ಸೇವೆಯಲ್ಲಿದ್ದು ಅದರಲ್ಲೂ ಕಾಂಗ್ರೆಸ್ ಆಡಳಿತ ಪಕ್ಷ ಜಾರಿಗೊಳಿಸಿರುವ ಶಕ್ತಿ ಯೋಜನೆಯಿಂದ ಕೆ.ಎಸ್.ಆರ್.ಟಿ.ಸಿ ಬಸ್ ಸಂಚಾರಕ್ಕೆ ಅಧಿಕ ಬೇಡಿಕೆಯಿದೆ. ಈ ನಿಟ್ಟಿನಲ್ಲಿ ತಾಲೂಕಿ ನ ಸಾರ್ವಜನಿಕರಿಗೆ, ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಸಮ ಯಕ್ಕೆ ಸರಿಯಾಗಿ ಬಸ್ ಸೌಲಭ್ಯ ಕಲ್ಪಿಸುವ ಸಂಕಲ್ಪ ಹೊಂದಲಾಗಿದೆ. ಅಲ್ಲದೆ ಅಧಿಕಾರಿಗಳೊಂದಿಗೆ ಚರ್ಚಿಸಿ ಅಧಿವೇಶನದಲ್ಲಿ ಸಾರಿಗೆ ಸಚಿವರ ಗಮನಕ್ಕೆ ತಂದು ಡಿಪೋ ನಿರ್ಮಾಣಕ್ಕೆ ಅಗತ್ಯ ಕ್ರಮಕೈಗೊಳ್ಳಲಾಗುವುದು. –3ನೇ ಪುಟಕ್ಕೆ

## ಪರಿಸರ ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯ : ಟಿ.ವಸಂತ್



ದಾವಣಗೆರೆ:–

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಆಶಯದಂತೆ ಮಾತೆಗೊಂದು ಮರ ಕಾರ್ಯಕ್ರಮದಡಿ ಪರಿಸರ ಸಂರಕ್ಷಣೆಗಾಗಿ ವಿವಿಧ ಬಗೆಯ ಗಿಡಗಳನ್ನು ನೆಡುವ ಮೂಲಕ ಪರಿಸರ ದಿನ ಆಚರಿಸಲಾಗುತ್ತಿದೆ ಎಂದು ಪರಿಸರ ಪ್ರೇಮಿ, ಔಷಧ ವ್ಯಾಪಾರಿ ಟಿ.ವಸಂತ್ ಹೇಳಿದರು. ನಗರದ ಎಸ್.ಎಸ್.ಬಡಾವಣೆಯಲ್ಲಿ ಪರಿವರ್ತನಾ ವೇದಿಕೆ, ಕರುಣಾ ಜೀವ ಟ್ರಸ್ಟ್, ಎಸ್.ಎಸ್.ಬಡಾವಣೆ ನಾಗರಿಕರ ಸಹಯೋಗದಲ್ಲಿ ಮಾತೆಗೊಂದು ಮರ ಕಾರ್ಯಕ್ರಮದಡಿ ನಡೆದ ಪರಿಸರ ದಿನಾಚರಣೆ ಅಂಗವಾಗಿ ಆಯೋಜಿಸಿದ ಸಸಿ ನೆಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಈ ಭಾಗದಲ್ಲಿ ಒಂದೊಂದು ಕುಟುಂಬಕ್ಕೆ ಒಂದೊಂದು ಗಿಡ ನೆಡುವ ಮೂಲಕ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬರೀ ಗಿಡಗಳನ್ನು ನೆಟ್ಟರೆ ಸಾಲದು, ಅವುಗಳನ್ನು ಬೆಳೆಸಿ ಪೋಷಿಸಬೇಕು. ಪರಿಸರ ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯ. ಈಗಾಗಲೇ –3ನೇ ಪುಟಕ್ಕೆ

# ವಿಕಲಚೇತನರು, ಹಿರಿಯ ನಾಗರಿಕರ ಹೆಸರಲ್ಲಿ ಅಕ್ರಮ: ಕ್ರಮಕ್ಕೆ ಆಗ್ರಹ



ಕಲಬುರಗಿ:– ಜಿಲ್ಲೆಯ ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಲ್ಲಿ ವ್ಯಾಪಕ ಅಕ್ರಮಗಳು ನಡೆದಿದ್ದು ಈ ಕುರಿತು ಕೂಡಲೇ ತನಿಖೆ ಕೈಗೊಂಡು ತಪ್ಪಿತಸ್ಥ ಅಧಿಕಾರಿ ಹಾಗೂ ಸಿಬ್ಬಂದಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ನವ ಕರ್ನಾಟಕ ಎಂಆರ್‌ಡಬ್ಲ್ಯು/ವಿಆರ್‌ಡಬ್ಲ್ಯು/ಯುಆರ್‌ಡಬ್ಲ್ಯು ವಿಕಲಚೇತನರ ಗೌರವಧನ ಕಾರ್ಯಕರ್ತರ ಸಂಘದ ಸಂಸ್ಥಾಪಕ ರಾಜ್ಯಾಧ್ಯಕ್ಷ ಅಂಬಾಜಿ ಮೇಟಿ ಜಿಲ್ಲಾಧಿಕಾರಿಗಳನ್ನು ಒತ್ತಾಯಿಸಿ ದ್ದಾರೆ.

ಈ ಕುರಿತು ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಇಲಾಖೆಯ ಜಿಲ್ಲಾ ಕಲ್ಯಾಣಾಧಿಕಾರಿ ಸಾದಿಕ್ ಹುಸೇನ್ ಖಾನ್ ಅವರು ಹಲವು ರೀತಿಯ ಅಕ್ರಮಗಳಲ್ಲಿ ತೊಡಗಿದ್ದು ದೈಹಿಕ ವಿಕಲಚೇತನರು, ದೃಷ್ಟಿ ವಿಕಲಚೇತನರು ಹಾಗೂ ಹಿರಿಯ ನಾಗರಿಕರಿಗೆ ತಲುಪಬೇಕಾದ ಸೌಲಭ್ಯಗಳನ್ನು ಒದಗಿಸದೆ ವ್ಯಾಪಕ ಅಕ್ರಮಗಳಲ್ಲಿ ತೊಡಗಿದ್ದಾರೆ. ಮೇಲಾಗಿ, ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು (ಎಂಆರ್‌ಡಬ್ಲ್ಯು), ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು (ವಿಆರ್‌ಡಬ್ಲ್ಯು) ಮತ್ತು ನಗರ ಪುನರ್ವಸತಿ ಕಾರ್ಯಕರ್ತರಿಗೆ (ಯುಆರ್‌ಡಬ್ಲ್ಯು) ಹಲವು ಬಗೆಯಲ್ಲಿ ಮಾನಸಿಕ ಕಿರುಕುಳ ನೀಡುತ್ತಾ ಸಾರ್ವಭೌಮ ಅಧಿಕಾರಿಯಂತೆ ವರ್ತಿಸುತ್ತಿದ್ದಾರೆ. ಈ ಕುರಿತು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿ ಕ್ರಮಕ್ಕೆ ಒತ್ತಾಯಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕಲಬುರಗಿಯ ಸರಕಾರಿ ಅಂಧ ಮಕ್ಕಳ (ಬಾಲಕರ) ವಸತಿ ನಿಲಯದ ನಾಲ್ವರು ಅಂಧ ವಿದ್ಯಾರ್ಥಿಗಳ ಮೇಲೆ ಡಿಸೆಂಬರ್ 1, 2023ರಂದು ನಿಷ್ಕಾರುಣ್ಯವಾಗಿ ಕ್ರಮಕೈಗೊಂಡು ಆ ಮಕ್ಕಳನ್ನು ಶಾಲೆಯಿಂದ ಹೊರಹಾಕಿ ಮನೆಗೆ ಕಳುಹಿಸಲಾಗಿದೆ.ಮೇಲಾಗಿ, ಈ ಬಡ ಮತ್ತು ಅಸಹಾಯಕ ಮಕ್ಕಳ ಮೇಲೆ ಕ್ರಮ ಕೈಗೊಳ್ಳುತ್ತಿರುವ ತಮ್ಮ ಧಾಟಿಯನ್ನು ಸಮರ್ಥಿಸಿಕೊಳ್ಳಲು ಎರಡು ವರ್ಷಗಳ ಹಿಂದಿನ ವಿಡಿಯೋಕ್ಲಿಪ್ಪಿಂಗ್ ಬಳಸಿಕೊಂಡು ಮಕ್ಕಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. ಹೀಗೆ ಕ್ರಮ ಕೈಗೊಳ್ಳುವ ಸಂದರ್ಭದಲ್ಲಿ ಪುರಾವೆಯಾಗಿ ಬಳಸಿಕೊಂಡಿರುವ ವಿಡಿಯೋ ತುಣುಕನ್ನು ವಿಧಿ ವಿಜ್ಞಾನ ಸಂಸ್ಥೆಯ (ಫೋರೆನ್ಸಿಕ್ ಲ್ಯಾಬೋರೇಟರಿ) ತಪಾಸಣೆಗೆ ಒಳಪಡಿಸಿ ಸೂಕ್ಷ್ಮವಾಗಿ ಪರಾಮರ್ಶಿಸಬೇಕೆಂದು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮನವಿ ಪತ್ರದಲ್ಲಿ ಅಂಬಾಜಿ ಮೇಟಿಕೋರಿದ್ದಾರೆ. ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಈ ನಾಲ್ವರು ದೃಷ್ಟಿ ವಿಕಲ ಚೇತನ ಮಕ್ಕಳ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಂಡು ಅವರ ಭವಿಷ್ಯದೊಂದಿಗೆ ಚೆಲ್ಲಾಟ ಆಡಿದ್ದಾಗ್ಯೂ, ಈ ನಾಲ್ಕೂ ವಿದ್ಯಾರ್ಥಿಗಳು ಕಳೆದ ಶೈಕ್ಷಣಿಕ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದು ಉತ್ತೀರ್ಣರಾಗುವ ಮೂಲಕ ಗಮನ ಸೆಳೆದಿದ್ದಾರೆ ಎಂದು ಅವರು ಸಮಾಧಾನ ವ್ಯಕ್ತಪಡಿಸಿದರು.

**ನಿಯಮಬಾಹಿರ ಹರಾಜು:**

ಕಲಬುರಗಿಯ ಸರಕಾರಿಕಿವುಡ ಮತ್ತು ಮೂಕ ಮಕ್ಕಳ ಶಾಲೆಯಲ್ಲಿ ಜೂನ್ 21, 20 24 ರಂದು ಅಕ್ರಮವಾಗಿ ಹಳೆಯ ಪೀಠೋಪಕರಣಗಳ ಹರಾಜು ಪ್ರಕ್ರಿಯೆ ಕೈಗೊಳ್ಳಲಾಗಿದೆ. ಹೀಗೆ ಹರಾಜು ಪ್ರಕ್ರಿಯೆ ಕೈಗೊಳ್ಳುವುದಕ್ಕೂ ಮುನ್ನ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ ಪತ್ರಿಕಾ ಪ್ರಕಟಣೆ ಹೊರಡಿಸಿ, ಆ ನಿಟ್ಟಿನಲ್ಲಿಅಗತ್ಯ ಎನಿಸಿದರೆ ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಿದ ಬಳಿಕ ಹರಾಜು ಪ್ರಕ್ರಿಯೆ ಕೈಗೊಳ್ಳಬೇಕಾಗುತ್ತದೆ.ಆದರೆ, ಈ ನಿಟ್ಟಿನಲ್ಲಿಯಾವುದೇ ನಿಯಮಗಳನ್ನು ಪಾಲಿಸದೆ ಕೇವಲ ಕಚೇರಿಯ ಸೂಚನಾ ಫಲಕಕ್ಕೆ ನೋಟಿಸ್ ಲಗತ್ತಿಸಿದಂತೆ ಮಾಡಿ ಅಕ್ರಮವಾಗಿ ಹರಾಜು ಪ್ರಕ್ರಿಯೆ ಕೈಗೊಂಡಿದ್ದಾರೆ.ಮೇಲಾಗಿ, ಈ ಶಾಲೆಯ ಉತ್ತಮ ಗುಣಮಟ್ಟದ ಪೀಠೋಪಕರಣಗಳನ್ನು 'ಅನುಪಯುಕ್ತ' ಎಂದು ತಾವೇ ನಿರ್ಧಾರ ಕೈಗೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸರಕಾರದ ಬೊಕ್ಕಸಕ್ಕೆ ವಂಚನೆ ಮಾಡಲಾಗಿದೆ.ಸರಕಾರಿ ಅಂಧ ಮಕ್ಕಳ ಶಾಲೆಯಲ್ಲಿ ಸಹ ಇಂಥದ್ದೇ ಅಕ್ರಮ ಹರಾಜು ಪ್ರಕ್ರಿಯೆ ಮಾರ್ಚ್ 9, 2024 ರಂದು ಕೈಗೊಳ್ಳಲಾಗಿದೆ ಎಂದು ದೂರಿದರು. ಇನ್ನು, ಸರಕಾರಿಅಂಧ ಮಕ್ಕಳ ಶಾಲೆಯಲ್ಲಿ ಮೇಲಿಂದ ಮೇಲೆ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ ಎಂದು ಪ್ರಸಕ್ತ 2024ನೇ ಸಾಲಿನಲ್ಲಿ ಈವರೆಗೆ ಒಟ್ಟು ಆರು ಬಾರಿ ದುರಸ್ತಿಯ ಹೆಸರಿನಲ್ಲಿ ಬಿಲ್ ಎತ್ತಲಾಗಿದೆ. ಒಂದೇ ಶಾಲೆಯಲ್ಲಿ ಕೇವಲ ಆರು ತಿಂಗಳ ಕಾಲಾವಕಾಶದಲ್ಲಿಆರು ಬಾರಿ ದುರಸ್ತಿ ಕಾರ್ಯಗಳನ್ನು ಕೈಗೊಳ್ಳುವುದು ತರ್ಕಬದ್ಧವೇ ಎಂಬುದನ್ನು ಪರಿಶೀಲಿಸಿ ಕಾನೂನು ಕ್ರಮ ಜರುಗಿಸ ಬೇಕೆಂದು ಕೋರಿದರು. ಗೌರವಾಧ್ಯಕ್ಷ ದತ್ತಾತ್ರೇಯ ಕುಡಕಿ, ಶಿವಕುಮಾರ್ ಮುಡ್ಡಿ, ತುಕಾರಾಂ ತುಳಸಿರಾಂ ಹಿರೋಳ್ಳಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

**ನಡೆಯದ ಕಾರ್ಯಾಗಾರ: ತನಿಖೆಗೆ ಆಗ್ರಹ**

ಮಾರ್ಚ್ 16, 2024ರಂದು ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಹಿರಿಯ ನಾಗರಿಕರ ಹಿತದೃಷ್ಟಿಯಿಂದ ಶ್ರವಣ ಸಾಧನಗಳ ವಿತರಣೆ ಕಾರ್ಯಾಗಾರ ಕೈಗೊಂಡಿರುವುದಾಗಿ ದಾಖಲೆ ಗಳನ್ನು ಸೃಷ್ಟಿಸಲಾಗಿದೆ.ಆದರೆ, ಹಿರಿಯ ನಾಗರಿಕರ ಕಾರ್ಯಾಗಾರ ಕೈಗೊಳ್ಳದೆ ಅಕ್ರಮ ಎಸಗಿರುವ ಕುರಿತು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ಎಲ್ಲವನ್ನೂ ವಿವರಿಸಲಾಗಿದೆ ಎಂದು ಅಂಬಾಜಿ ಮೇಟಿ ಹೇಳಿದರು.

ಹಿರಿಯ ನಾಗರಿಕರಿಗಾಗಿ ಕಾರ್ಯಾಗಾರ ಹಮ್ಮಿಕೊಂಡಿದ್ದೇ ನಿಜವಾಗಿದ್ದಲ್ಲಿ ಅಂದಿನ ಕಾರ್ಯಾಗಾರದ ಸಂಪೂರ್ಣ ವಿಡಿಯೋ ಚಿತ್ರೀಕರಣದ ದೃಶ್ಯಾವಳಿಯ ಪರಿಶೀಲನೆ ಕೈಗೊಳ್ಳುವುದರ ಜೊತೆಗೆ ಕಾರ್ಯಾಗಾರದ ಎಲ್ಲ ಫಲಾನುಭವಿಗಳ ಸೋಷಿಯಲ್ ಆಡಿಟಿಂಗ್ ಕೈಗೊಳ್ಳಬೇಕೆಂದು ಮೇಟಿ ಒತ್ತಾಯಿಸಿದರು.

## ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ವೈದ್ಯರ ಸಲಹೆ ಅವಶ್ಯಕ: ಡಾ.ಪಿ.ಎಸ್.ಶಂಕರ್



ಕಲಬುರಗಿ:– ಸಮಾಜದಲ್ಲಿ ಪ್ರತಿಯೊಬ್ಬರೂ ಆರೋಗ್ಯವಂತರಾಗಿ ಜೀವನ ಸಾಗಿಸಲು ವೈದ್ಯರ ಸಲಹೆ ಮತ್ತು ಉಪಚಾರ ಪಡೆದುಕೊಳ್ಳುವುದು ಅವಶ್ಯಕವಾಗಿದೆ ಎಂದು ಖ್ಯಾತ ವೈದ್ಯಸಂಶೋಧಕ ಹಾಗೂ ನಾಡೋಜ ಡಾ.ಪಿ.ಎಸ್.ಶಂಕರ ಅವರು ಸಲಹೆ ಮಾಡಿದರು. ಅವರಿಂದು ಗಂಜ್ ಪ್ರದೇಶದ ಲ್ಲಿರುವ ನಗರೇಶ್ವರ ಶಾಲೆಯಲ್ಲಿ ಆರ್ಯ ವೈಶ್ಯ ಅಧಿಕಾರಿಗಳ ಮತ್ತು ವೃತ್ತಿ ನಿರತ್ನ ಸಂಘವು ಆಯೋಜಿಸಿದ ಉಚಿತ ಮೆಘಾ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತ, ಡೆಂಗ್ಯು, ಮಲೇರಿಯಾ, ಚಿನ್ ಗುನ್ಯಾದಂತಹ ರೋಗವನ್ನು ಬರದಂತೆ ತಡೆಗಟ್ಟುವಲ್ಲಿ ಸಾರ್ವಜನಿಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಡಾ.ಶಂಕರ್ ಕರೆ ನೀಡಿದರು. ಪ್ರತಿಯೊಬ್ಬರು ರೋಗ ವನ್ನು ಬರದಂತೆ ನೋಡಿಕೊಳ್ಳುವ ದಿಂದಾಗಿ ಶುಚಿತ್ವ ಆಹಾರ ಸೇವನೆ ಮಾಡುವುದು ಅಗತ್ಯವಾಗಿದೆ ಎಂದು ಹೇಳಿದರು. ಆರೋಗ್ಯ ತಪಾಸಣಾ ಶಿಬಿರದ ಅಧ್ಯಕ್ಷತೆ ವಹಿಸಿದ್ದ ಆರ್ಯ ವೈಶ್ಯ ಸಂಘದ ಜಿಲ್ಲಾಧ್ಯಕ್ಷ ರಾಘವೇಂದ್ರ ಮೈಲಾಪೂರ ಅವರು ಮಾತನಾಡುತ್ತ,ಗ್ರಾಮೀಣ ಪ್ರದೇಶದ ಹಾಗೂ ಪಟ್ಟಣದ ಜನತೆ ಈ ಉಚಿತ ಶಿಬಿರದ ಸದುಪಯೋಗ ಪಡೆದುಕೊಂಡು ಆರೋಗ್ಯ ಕಾಪಾಡಿ ಕೊಳ್ಳಬೇಕೆಂದು ಕರೆ ನೀಡಿದರು. ಸಂಘದ ಅಧ್ಯಕ್ಷ ಹಣಮಯ್ಯ ಬೇಲೂರೆಯವರು ಸರ್ವರನ್ನು ಸ್ವಾಗತಿಸಿದರು. ವೇದಿಕೆಯ ಮೇಲೆ ಹಿರಿಯ ವೈದ್ಯ ಡಾ.ವಿದ್ಯಾಸಾಗರ ಇಟಗಂಪಲ್ಲಿ, ರಾಘವೇಂದ್ರ ಗುಪ್ತಾ, ಡಾ.ಪ್ರವೀಣಕುಮಾರ, ಡಾ.ಗುರುರಾಜ ಪ್ರಮೋದ, ಡಾ.ರೇಣುಕಾ ಪ್ರಸಾದ, ಡಾ.ರಾಹುಲ ಮಂದಕನಳ್ಳಿ, ಡಾ.ಕೋಠಾರಿ ಸೇರಿದಂತೆ ಅನೇಕರು ಭಾಗವಹಿಸಿ, ರೋಗಿಗಳಿಗೆ ಪರೀಕ್ಷಿಸಿ ವೈದ್ಯಕೀಯ ಔಷಧಗಳನ್ನು ಉಚಿತವಾಗಿ ನೀಡಿದರು. ಕಾರ್ಯಕ್ರಮವನ್ನು ಸಂಗೀತಾ ಶ್ರೀಧರ ಅವರು ನಿರೂಪಣೆ ಮಾಡಿದರು.

# ಸಹಕಾರಿ ಚಳುವಳಿಯ ಯಶಸ್ವಿಗೆ ಜನರ ಶ್ರಮ ಅಗತ್ಯ



ಕಲಬುರಗಿ:– ಭಾರತದಲ್ಲಿ ಸಹಕಾರಿ ಚಳುವಳಿ ಆರಂಭವಾಗಿ ಶತಮಾನ ಕಳೆದರು ಕೂಡಾ ಅದರ ತತ್ವ, ಆಶಯ ಜನಸಾಮಾನ್ಯರಿಗೆ ಮುಟ್ಟುತ್ತಿಲ್ಲ. "ತಾನು ಎಲ್ಲರಿಗಾಗಿ, ಎಲ್ಲರೂ ತನಗಾಗಿ" ಎಂಬ ಸಹಕಾರದ ತತ್ವದ ಅಡಿಯಲ್ಲಿ ಕಾರ್ಯನಿರ್ವಹಿಸುವ ಸಹಕಾರಿ ಸಂಘಗಳು ಮತ್ತು ಇಲಾಖೆಯ ಸದುಪಯೋಗವನ್ನು ಮಾಡಿಕೊಳ್ಳಬೇಕು. ಸಹಕಾರಿ ಚಳುವಳಿಯ ಯಶಸ್ವಿಗೆ ಇಲಾಖೆ, ಸಂಘಗಳ ಜೊತೆ–ಗೆ ಜನರು ಶ್ರಮ ವಹಿಸಬೇಕಾಗಿದೆ ಎಂದು ಜಿಲ್ಲಾ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪನಿರ್ದೇಶಕ ಸುಭಾಶ್ಚಂದ್ರ ಎಸ್.ಬರ್ಮಾ ಹೇಳಿದರು.

ನಗರದ ಮಿನಿ ವಿಧಾನಸೌಧದಲ್ಲಿರುವ ಜಿಲ್ಲಾ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಕಚೇರಿಯಲ್ಲಿ 'ಸಹಕಾರ ಇಲಾಖೆ', 'ಜಯಾ ಹರಿಜನ–ಗಿರಿಜನ ಮಹಿಳಾ ವಿವಿದೋದ್ದೇಶ ಸಹಕಾರ ಸಂಘ', 'ಸಿದ್ಧಾರ್ಥ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಪತ್ತಿನ ಸಹಕಾರ ಸಂಘ' ಮತ್ತು 'ಬಸವೇಶ್ವರ ಸಮಾಜ ಸೇವಾ ಬಳಗ' ಇವುಗಳು ಸಂಯುಕ್ತವಾಗಿ ಭಾನುವಾರ ಏರ್ಪಡಿಸಿದ್ದ 'ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆ' ಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ರಾಷ್ಟ್ರದ ಜನಸಾಮಾನ್ಯರ ಆರ್ಥಿಕ ಜೀವನದ ಸುಗಮ ನಿರ್ವಹಣೆಗೆ ಸಹಾಯಕರವಾಗಿ ಸಹಕಾರಿ ಸಂಸ್ಥೆಗಳು ಸೇವೆ ಸಲ್ಲಿಸುತ್ತಿವೆ. ಜನರು ಸಕ್ರಿಯವಾಗಿ ಭಾಗವಹಿಸಬೇಕು. ಸದಸ್ಯರಾಗುವುದು, ಸಂಘಗಳ ರಚನೆ, ಸ್ವಯಂ ಉದ್ಯೋಗವನ್ನು ಮಾಡುವ ಮೂಲಕ ಸ್ವಂತ ಬೆಳವಣಿಗೆಗೆ ಜೊತೆ ಸಂಘ–ಸಂಸ್ಥೆಗಳನ್ನು ಅಭಿವೃದ್ಧಿಪಡಿಸಬೇಕು. ಸಹಕಾರ ಇಲಾಖೆಗೆ ಸಂಬಂಧಿಸಿದಂತೆ ಸರ್ಕಾರದ ವಿವಿಧ ಯೋಜನೆಗಳನ್ನು ಬಳಸಿಕೊಳ್ಳುವಂತೆ ತಿಳಿಸಿದರು.

ಸಹಕಾರಿ ಧುರೀಣ ಡಾ.ಸುನೀಲ ಕುಮಾರ ಎಚ್.ವಂಟಿ ಮಾತನಾಡಿ, 'ಸಹಕಾರ' ಎಂಬ ಶಬ್ದವೇ ಬಹಳ ಅದ್ಭುತವಾದದ್ದು. ಎಲ್ಲೆಡೆ ಸಹಕಾರವಿರಬೇಕು. 'ವಸ್ತು ವಿನಿಮಯ ಪದ್ಧತಿ'ಯಿಂದ 'ಹಣ ವಿನಿಮಯ ಪದ್ಧತಿ'ಯೆಡೆಗೆ ಜನಸಾಮಾನ್ಯರನ್ನು ಸೆಳೆದು, ಆರ್ಥಿಕ ಜ್ಞಾನವನ್ನುಂಟು ಮಾಡುವಲ್ಲಿ ಸಹಕಾರ ಚಳುವಳಿ ಪಾತ್ರವಹಿಸಿದೆ. ಸಹಕಾರಿ ಸಂಸ್ಥೆಗಳ ಪಾತ್ರದ ಬಗ್ಗೆ ವ್ಯಾಪಕವಾದ ಜನಜಾಗೃತಿಯಾಗಬೇಕಾಗಿದೆ. ಈ ಕೇತ್ರವನ್ನು ರಾಜಕೀಯ ಮುಕ್ತವಾಗಿ ಬೆಳೆಸಿದರೆ, ಇನ್ನೂ ಹೆಚ್ಚಿನ ಜನರಿಗೆ ಅನಕೂಲವಾಗಲು ಸಾಧ್ಯವಾಗುತ್ತದೆ ಎಂದರು. ವಿಶೇಷ ಉಪನ್ಯಾಸ ನೀಡಿದ ಅರ್ಥ ಶಾಸ್ತ್ರ ಉಪನ್ಯಾಸಕ ಎಚ್.ಬಿ.ಪಾಟೀಲ, ಸಹಕಾರಿ ತತ್ವವು ವೈಯಕ್ತಿಕ ಸ್ವಾರ್ಥವನ್ನು ಬಿಟ್ಟ ಪರಸ್ಪರ ಬೆರೆ ಯುವುದನ್ನು ಕಲಿಸುತ್ತದೆ. ಆರ್ಥಿಕ ಸ್ಥಿತಿ ಸುಧಾರಿಸುತ್ತದೆ. ಪ್ರಜಾಪ್ರಭುತ್ವ ಸಂಸ್ಥೆಯಾಗಿದೆ. ಸ್ವಸಹಾಯ ಮತ್ತು ಪರಸ್ಪರ ಸಹಾಯದ ಗುಣವನ್ನು ಹೊಂದಿದೆ. ಸೇವೆಯೇ ಮುಖ್ಯ ಗುರಿಯಾಗಿದ್ದು, ಲಾಭ ಗಳಿಕೆ ಗೌಣವಾಗಿದೆ. ಅಗ್ಗದ ಸಾಲ ಸೌಲಭ್ಯ ದೊರೆಯುತ್ತದೆ. ಉಳಿತಾಯ ಹಾಗೂ ಹೂಡಿಕೆಗೆ ಉತ್ತೇಜನ ನೀಡುತ್ತದೆ. ಸಹಕಾರಿ ಸಂಘಗಳು ವಿಶೇಷವಾಗಿ ರೈತರು, ಜನಸಾಮಾನ್ಯರಿಗೆ ತುಂಬಾ ಪ್ರಯೋಜನೆಯಾಗಿವೆ. ಆದರೆ ರಾಜಕೀಯ ಹಸ್ತಕ್ಷೇಪ, ಬಂಡವಾಳದ ಕೊರತೆ, ಭ್ರಷ್ಟಾಚಾರ, ತರಬೇತಿಯ ಅಭಾವ, ವಸೂಲಾಗದ ಸಾಲದ ಬಾಕಿ, ಸಹಕಾರಿ ತತ್ವದ ಅರಿವಿನ ಕೊರತೆಯಂತಹ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇವುಗಳ ಪರಿಹಾರ ದತ್ತ ಚಿತ್ತ ಹರಿಸಿ, ಸಹಕಾರಿ ಕ್ಷೇತ್ರ ಅಭಿವೃದ್ಧಿಪಡಿಸಬೇಕಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಹಕಾರಿ ಧುರೀಣ ಅಶೋಕ ಕಂಟೀಗೋಳ, ನಿವೃತ್ತ ಕೃಷಿ ಅಧಿಕಾರಿ ಶಿವಯೋಗೆಪ್ಪಾ ಎಸ್.ಬಿರಾದಾರ, ನಿವೃತ್ತ ಮುಖ್ಯ ಶಿಕ್ಷಕ ಬಸಯ್ಯಸ್ವಾಮಿ ಹೊದಲೂರ, ಮುಖ್ಯ ಶಿಕ್ಷಕ ದೇವೇಂದ್ರಪ್ಪ ಗಣಮುಖಿ, ಪ್ರಾಂಶುಪಾಲ ಸುಮಿತ್ರಾ ಗಾಯಕವಾಡ, ಸಹಕಾರಿ ಕ್ಷೇತ್ರದ ಸಂಶೋಧನಾರ್ಥಿ ಮಾಲಾಶ್ರೀ ಎಸ್. ಭಜಂತ್ರಿ, ಶ್ವೇತಾ ಗಾಯಕವಾಡ ಸೇರಿದಂತೆ ಇನ್ನಿತರರಿದ್ದರು.

# ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯಿಂದ ಸಂವಿಧಾನದ 371 (ಜೆ) ವಿಧಿಯ ನಿಬಂಧನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಒತ್ತಾಯ



ಕಲಬುರಗಿ:– ಹೈದ್ರಾಬಾದ್ ಕರ್ನಾಟಕ ಹೋರಾಟ ಸಮಿತಿಯು, ಬೆಂಗಳೂರಿನಲ್ಲಿ ಕಲ್ಯಾಣ ಕರ್ನಾಟಕ ಭಾಗದ ಚುನಾಯಿತ ಪ್ರತಿನಿಧಿಗಳು ಮತ್ತು ಸಚಿವರ ಸಭೆ ನಡೆಸಿ, ಸಚಿವರು, ಶಾಸಕರು ಮತ್ತು ಸಮಿತಿಯ ಸದಸ್ಯರನ್ನೊಳಗೊಂಡ ನಿಯೋಗದ ಮೂಲಕ, ಸಂವಿಧಾನದ 371 (ಜೆ) ವಿಧಿಯ ನಿಬಂಧನೆಗಳ ಅನುಷ್ಠಾನ ಮತ್ತು 371 (ಜೆ) ಹಾಗೂ ಅದರ ನಿಯಮಗಳು, ನಿಬಂಧನೆಗಳಲ್ಲಿ ಒದಗಿಸಿದಂತೆ ಕಲ್ಯಾಣ ಕರ್ನಾಟಕ ಪ್ರದೇಶದ ಜನರಿಗೆ ನೀಡಬೇಕಾದ ಎಲ್ಲಾ ಪ್ರಯೋಜನಗಳನ್ನು ವಿಸ್ತರಿಸುವುದಕ್ಕೆ ಒತ್ತಾಯಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಲು ನಿರ್ಧರಿಸಿದೆ. ಕಲಬುರಗಿ ನಗರದಲ್ಲಿ ಭಾನುವಾರ ನಡೆದ ಸಮಿತಿಯ ಉನ್ನತ ಮಟ್ಟದ ಕೋರ್ ಕಮಿಟಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಮಿತಿಯ ಗೌರವಾಧ್ಯಕ್ಷ ಶ್ರೀ ಬಸವರಾಜ ದೇಶಮುಖ ಹಾಗೂ ಅಧ್ಯಕ್ಷ ಲಕ್ಷ್ಮಣ ದಸ್ತಿ, ನಿಯೋಗವು ಬೆಂಗಳೂರಿಗೆ ಭೇಟಿ ನೀಡಲಿದೆ ಎಂದು ಹೇಳಿದರು. ಕಲ್ಯಾಣ ಕರ್ನಾಟಕ ಪ್ರದೇಶದಿಂದ ಆಯ್ಕೆಯಾದ ಸಚಿವರು ಮತ್ತು ಶಾಸಕರ ಸಭೆ ನಡೆಸಿ, ಹಳೇ ಮೈಸೂರು ಮತ್ತು ಕಿತ್ತೂರು ಕರ್ನಾಟಕ ಪ್ರದೇಶದಲ್ಲಿ ಪಟ್ಟಭದ್ರ ಹಿತಾಸಕ್ತಿಗಳು 371 (ಜೆ) ವಿಧಿಯ ಅನುಷ್ಠಾನವನ್ನು ಬುಡಮೇಲು ಮಾಡಲು ಮತ್ತು ಮೀಸಲಾತಿ ಹಕ್ಕುಗಳನ್ನು ನಿರಾಕರಿಸಲು ನಡೆಸಿದ ಸಂಘಟಿತ ಪ್ರಯತ್ನಗಳನ್ನು ತಿಳಿಸಲು, ಆರ್ಟಿಕಲ್ 371 (ಜೆ) ನಲ್ಲಿ ಪ್ರತಿಪಾದಿಸಲಾದ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿನ ಮೀಸಲಾತಿಗಾಗಿ ಇವರೆಲ್ಲರ ತುರ್ತು ಹಸ್ತಕ್ಷೇಪದ ಅಗತ್ಯವಿದೆ ಎಂದರು. ನಂತರ ಕಲ್ಯಾಣ ಕರ್ನಾಟಕ ಭಾಗದ ಸಚಿವರು ಮತ್ತು ಶಾಸಕರನ್ನೊಳಗೊಂಡ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರನ್ನು ಭೇಟಿ ಮಾಡಿ, 371 (ಜೆ) ವಿಧಿಯ ನಿಬಂಧನೆಗಳ ಪರಿಣಾಮಕಾರಿ ಅನುಷ್ಠಾನದ ಅಗತ್ಯತೆ ಹಾಗೂ ವಿಶೇಷವಾಗಿ ಕಲ್ಯಾಣ ಕರ್ನಾಟಕ ಪ್ರದೇಶವನ್ನು ಹೊರತುಪಡಿಸಿ ಇತರ ಪ್ರದೇಶಗಳಲ್ಲಿ ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರದಲ್ಲಿ ಮೀಸಲಾತಿಯನ್ನು ವಿಸ್ತರಿಸಲು ನಿಯಮಗಳು ಮತ್ತು ನಿಬಂಧನೆಗಳ ಮೇಲೆ ವಿವಿಧ ನ್ಯಾಯಾಲಯಗಳು ಒದಗಿಸಿದ ನಮೂನೆಯಲ್ಲಿನ ಅಡಚಣೆಗಳನ್ನು ನಿವಾರಿಸುವಂತೆ ಒತ್ತಾಯಿಸಿ ಮನವಿ ಸಲ್ಲಿಸಲಾಗುವುದು ಎಂದು ಶ್ರೀ ದೇಶಮುಖ್ ಹೇಳಿದರು. ಇಡೀ ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ತಜ್ಞರ ತಂಡವನ್ನು ರಚಿಸುವ ಮೂಲಕ ಎಲ್ಲಾ ಶಾಲಾ–ಕಾಲೇಜುಗಳಲ್ಲಿ ಸಮಿತಿಯಿಂದ ಬೃಹತ್ ಜಾಗೃತಿ ಅಭಿಯಾನವನ್ನು ಸಹ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಸಮಿತಿಯು 371 (ಜೆ) ನಿಬಂಧನೆಗಳ ಪರಿಣಾಮಕಾರಿ ಅನುಷ್ಠಾನದ ಅಗತ್ಯತೆಯ ಕುರಿತು ವಿಚಾರ ಸಂಕಿರಣವನ್ನು ಸಹ ನಡೆಸಲಿದೆ ಮತ್ತು ಅದನ್ನು ಉದ್ಘಾಟಿಸಲು ಎಐಸಿಸಿ ಅಧ್ಯಕ್ಷ ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರನ್ನು ಆಹ್ವಾನಿಸಲಾಗುವುದು ಎಂದು ಹೇಳಿದರು. 371 (ಜೆ) ವಿಧಿಯಲ್ಲಿನ ನಿಬಂಧನೆಗಳ ಕುರಿತು ಪರಿಣಿತರಾದ ಶ್ರೀ ಬಸವರಾಜ ಕೊಣ್ಣೂರ ಅವರು, ಅನುಷ್ಠಾನದಲ್ಲಿ ಉದ್ಭವಿಸುವ ಎಲ್ಲಾ ವಿವಾದಗಳ ತೀರ್ಪುಗಾಗಿ 371 (ಜೆ) ನ ನಿಯಮಗಳು ಮತ್ತು ನಿಬಂಧನೆಗಳ ಪ್ರಕಾರ ನ್ಯಾಯ ಮಂಡಳಿಯ ಸಂವಿಧಾನದ ತುರ್ತು ಅಗತ್ಯವಿದೆ ಎಂದು ಹೇಳಿದರು. ನ್ಯಾಯಾಧಿಕರಣದ ನಿಬಂಧನೆಗಳು ಮತ್ತು ತೀರ್ಪು ಅಂತಿಮವಾಗಿರಬೇಕು. ಹೈದರಾಬಾದ್ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳ ನೇಮಕಾತಿಗೆ ಗರಿಷ್ಠ ವಯೋಮಿತಿಯನ್ನು ಹೆಚ್ಚಿಸಬೇಕು ಮತ್ತು ಕಲ್ಯಾಣ ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳಿಗೆ 371 (ಜೆ) ಪ್ರಕಾರ ಗ್ರೇಸ್ ಅಂಕಗಳನ್ನು ನೀಡಬೇಕು. 371 (ಜೆ) ವಿಧಿಯ ನಿಯಮಗಳು ಮತ್ತು ನಿಬಂಧನೆಗಳನ್ನು ತಕ್ಷಣ ಜಾರಿಗೆ ತರಬೇಕು ಎಂದು ಅವರು ಹೇಳಿದರು.

# ಬೆಳೆ ವಿಮೆ ಪ್ರಚಾರ ವಾಹನಕ್ಕೆ ಚಾಲನೆ



ಕಲಬುರಗಿ:– ನಗರದ ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯದಲ್ಲಿ ಕಲಬುರಗಿ ದಕ್ಷಿಣ ಮತಕ್ಷೇತ್ರದ ಶಾಸಕ ಅಲಮ ಪ್ರಭು ಪಾಟೀಲ್ ಅವರು 2024–25 ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯ ಪ್ರಚಾರ ವಾಹನಕ್ಕೆ ಚಾಲನೆ ನೀಡಿ ಬೆಳೆ ವಿಮೆಗೆ ಸಂಬಂಧಪಟ್ಟ ಪೋಸ್ಟರ್ ಹಾಗೂ ಹಸ್ತಪ್ರತಿ ಬಿಡುಗಡೆಗೊಳಿಸಿದರು. 2023–24ನೇ ಸಾಲಿನಲ್ಲಿ ದಕ್ಷಿಣ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 28 ಗ್ರಾಮಗಳಲ್ಲಿ ಬೆಳೆ ಪರಿಹಾರ ಅಡಿಯಲ್ಲಿ 7898 ರೈತರಿಗೆ 8.78 ಕೋಟಿ ಹಾಗೂ ಬೆಳೆ ವಿಮೆ ಯೋಜನೆಯಡಿ 3770 ರೈತರಿಗೆ 2.65 ಕೋಟಿ ಮತ್ತು ತೊಗರಿ ಬೆಳೆ ನೆಟೆ ರೋಗದ ಪರಿಹಾರ 5139 ರೈತ ಫಲಾನುಭವಿಗಳಿಗೆ 5.01 ಕೋಟಿ ಹೀಗೆ ಒಟ್ಟು 16.807 ರೈತ ಫಲಾನುಭವಿಗಳಿಗೆ 16.45 ಕೋಟಿ ರೂಪಾಯಿಗಳನ್ನು ರೈತರ ಖಾತೆಗೆ ನೇರವಾಗಿ ಜಮಾ ಮಾಡಲಾಗಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಜಂಟಿ ಕೃಷಿ ನಿರ್ದೇಶಕರು ಮಾತನಾಡಿ, ಎಲ್ಲಾ ರೈತರು ತಾವು ಬೆಳೆದ ಬೆಳೆಗಳಿಗೆ ವಿಮೆ ಮಾಡಿಸಬೇಕು ಎಂದು ಮನವಿ ಮಾಡಿಕೊಂಡರು. ತೊಗರಿ, ಹೆಸರು, ಉದ್ದು, ಸೋಯಾ, ಅವರೆ, ಎಳ್ಳು, ಹತ್ತಿ, ಬೆಳೆಗಳಿಗೆ ವಿಮೆ ಮಾಡಿಸಲು ಜು. 31 ಕೊನೆಯ ದಿನಾಂಕ ಆಗಿರುವುದರಿಂದ ಆದಷ್ಟು ಬೇಗ ಎಲ್ಲಾ ರೈತರು ತಮ್ಮ ವ್ಯಾಪ್ತಿಯಲ್ಲಿ ಬರುವ ಬ್ಯಾಂಕ್/ಸಾಮಾನ್ಯ ಸೇವಾ ಕೇಂದ್ರ , ಅಂಚೆ ಕಛೇರಿಯಲ್ಲಿ ನೊಂದಣಿ ಮಾಡಲು ಕೋರಿದರು. ಬೆಳೆ ವಿಮೆ ಪರಿಹಾರ ಮತ್ತು ಇಲಾಖೆಯ ಯಾವುದೇ ಯೋಜನೆಯ ಲಾಭ ಪಡೆಯಬೇಕಾದರೆ ರೈತರು ಕಡ್ಡಾಯವಾಗಿ ಎಸ್‌ಐಡಿ ನೊಂದಣಿ ಮಾಡಬೇಕು ಹೆಚ್ಚಿನ ಮಾಹಿತಿಗಾಗಿ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಸಂಪರ್ಕಿಸಿ ಮಾಹಿತಿ ಪಡೆಯಲು ಕೋರಲಾಗಿದೆ. ಈ ಸಂದರ್ಭದಲ್ಲಿ ಕೃಷಿ ಉಪ ನಿರ್ದೇಶಕ ಸೋಮಶೇಖರ ಬಿರಾದಾರ ಹಾಗೂ ಸಹಾಯಕ ಕೃಷಿ ನಿರ್ದೇಶಕ ಚಂದ್ರಕಾಂತ ಜೀವಣಗಿ, ಬೆಳೆ ವಿಮೆ ಪ್ರತಿನಿಧಿಗಳಾದ ಶಿವು ನರೋಣಾ ಮತ್ತು ಸೋಮಲಿಂಗಯ್ಯ ಹಾಗೂ ಕೃಷಿ ಅಧಿಕಾರಿಗಳಾದ ಅಬ್ದುಲ್ ಕರೀಂ ಮತ್ತು ಸಹಾಯಕ ಕೃಷಿ ಅಧಿಕಾರಿಗಳಾದ ರಾಹುಲ್ ಚವ್ಹಾಣ ಹಾಗೂ ಗೌಸ್ ಅಬೀದ, ರೈತರು ಮತ್ತು ಇಲಾಖಾ ಅಧಿಕಾರಿಗಳು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

# ಜಿಲ್ಲಾಧಿಕಾರಿ ಮಹಾರಾಜನಲ್ಲ

ಕೆಲಸ ಮಾಡಿದ್ದರೆ ಇಷ್ಟೊಂದು ಮಂದಿ ನನ್ನ ಬಳಿ ಅಹವಾಲು ಹೊತ್ತು ಬರಲು ಸಾಧ್ಯ ಇರಲಿಲ್ಲ. ನೀವುಗಳು ಸರಿಯಾಗಿ ಕೆಲಸ ಮಾಡಿ. ಅರ್ಜಿಗಳನ್ನು ಫಾರ್ವರ್ಡ್ ಮಾಡಿ ಕೈ ತೊಳೆದುಕೊಳ್ಳುವುದು ಬೇಡ ಎಂದು ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ತಾಕೀತು ಮಾಡಿದರು.ಜನರ ಸಮಸ್ಯೆಗಳಿಗೆ ಪರಿಹಾರ ಕೊಡಿಸಲು ನಿಮ್ಮ ಕೈಯಲ್ಲಿ ಸಾಧ್ಯವಿಲ್ಲ ಎಂದರೆ ನೀವು ಅಧಿಕಾರಿಗಳಾಗಿ ಏಕೆ ಇರಬೇಕು. ಅರ್ಜಿಗಳನ್ನು ಫಾರ್ವರ್ಡ್ ಮಾಡಲು ನಿಮ್ಮ ಅಗತ್ಯ ಇದೆಯೇ ಎಂದು ಅವರು ಖಾರವಾಗಿ ಪ್ರಶ್ನಿಸಿದರು.ಜಿಲ್ಲಾಧಿಕಾರಿಗಳು, ತಹಶೀಲ್ದಾರ್‌ಗಳು ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಜನರನ್ನು ಭೇಟಿ ಮಾಡುತ್ತಿಲ್ಲ ಎಂದು ಅಸಮಾಧಾನ ಹೊರ ಹಾಕಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕೆಲವೆಡೆ ನಾನು ಕೊಟ್ಟಿರುವ ಸೂಚನೆಗಳನ್ನು ಸರಿಯಾಗಿ ಅಧಿಕಾರಿಗಳು ಪಾಲಿಸುತ್ತಿಲ್ಲ. ಪಿಡಿಓಗಳು, ಗ್ರಾಮ ಆಡಳಿತಾಧಿಕಾರಿಗಳು ತಾವು ಕೆಲಸ ಮಾಡುವ ಜಾಗದಲ್ಲೇ ವಾಸ್ತವ್ಯ ಇರಬೇಕು. ಈ ಬಗ್ಗೆ ಗಮನ ಹರಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

**ಡೆಂಗ್ಯೂ ನಿಯಂತ್ರಣಕ್ಕೆ ತಾಕೀತು**

ರಾಜ್ಯದಲ್ಲಿ ಮಳೆಗಾಲ ಆರಂಭವಾಗಿದೆ. ಡೆಂಗ್ಯೂ ಜ್ವರದ ಹಾವಳಿ ಹೆಚ್ಚಾಗುತ್ತಿದೆ. ತಕ್ಷಣವೇ ಡೆಂಗ್ಯೂ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಿ, ಡೆಂಗ್ಯೂ ಜ್ವರ ನಿಯಂತ್ರಣಕ್ಕೆ ಬರಬೇಕು. ಇಲ್ಲದಿದ್ದರೆ ನಿಮ್ಮನ್ನೇ ಜವಾಬ್ದಾರರನ್ನಾಗಿ ಮಾಡುತ್ತೇನೆ ಎಂದು ಖಡಕ್ ಆಗಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಡೆಂಗ್ಯೂ ನಿಯಂತ್ರಣಕ್ಕೆ ಏನೆಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನೆಲ್ಲ ಕೈಗೊಳ್ಳಿ. ಹಾಗೆಯೇ ಡೆಂಗ್ಯೂ ಜ್ವರ ಪೀಡಿತರಿಗೆ ಆಸ್ಪತ್ರೆಗಳಲ್ಲಿ ಸೂಕ್ತ ಚಿಕಿತ್ಸೆಗೂ ವ್ಯವಸ್ಥೆ ಮಾಡಿಕೊಳ್ಳಿ ಎಂದು ಸೂಚನೆ ನೀಡಿದರು.ಡೆಂಗ್ಯೂ ನಿಯಂತ್ರಣಕ್ಕೆ ಸಮಾರೋಪಾದಿಯಲ್ಲಿ ಕೆಲಸ ಮಾಡಿ, ಜಿಲ್ಲಾ ಆರೋಗ್ಯಾಧಿಕಾರಿಗಳು ತಾಲ್ಲೂಕು ಮಟ್ಟದ ಅಧಿಕಾರಿಗಳ ಜತೆ ಸಭೆ ನಡೆಸಿ ಡೆಂಗ್ಯೂ ನಿಯಂತ್ರಣಕ್ಕೆ ಮುಂದಾಗಿ ಎಂದು ಕರೆ ನೀಡಿದರು.ಪ್ರತಿ ಜಿಲ್ಲಾಧಿಕಾರಿಗಳು, ಸಿಇಓಗಳು ತಾವು ಕೆಲಸ ಮಾಡುವ ಜಿಲ್ಲೆಗಳ ಸಮಗ್ರ ಮಾಹಿತಿಗಳನ್ನು ಅಂಗೈಯಲ್ಲಿಟ್ಟುಕೊಂಡು ಉತ್ಸಾಹದಿಂದ ಕೆಲಸ ಮಾಡಬೇಕು. ಉದಾಸೀನ, ನಿರ್ಲಕ್ಷ್ಯ, ವಿಳಂಬ ಧೋರಣೆ ಸರಿಯಲ್ಲ. ಉತ್ಸಾಹದಿಂದ ಕೆಲಸ ಮಾಡಿದಾಗ ಮಾತ್ರ ಪ್ರಗತಿ ಮತ್ತು ಅಭಿವೃದ್ಧಿಯ ವೇಗ ಕಾಣಲು ಸಾಧ್ಯವಾಗುತ್ತದೆ ಎಂದರು.ಭ್ರಷ್ಟಾಚಾರ ನಿಯಂತ್ರಣಕ್ಕೂ ಗಮನ ಕೊಡಿ. ಹಿಂದೆ ಭ್ರಷ್ಟಾಚಾರ ಹೇಗಿತ್ತು, ಇಂದು ಹೇಗಿದೆ ಎಂದು ನೋಡಿದಾಗ ಕಾರ್ಯಾಂಗ ಮತ್ತು ಶಾಸಕಾಂಗ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವುದು ಗೊತ್ತಾಗುತ್ತಿದೆ. ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಆಗಾದಾಗ ಪ್ರಗತಿ ಸಾಧ್ಯವಾಗುತ್ತದೆ ಎಂದರು.ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಕೆಲಸ ಮಾಡಿ ಸೂಚನೆ ನೀಡಿದರು.ರಾಜ್ಯದಲ್ಲಿ ಬಿತ್ತನೆ ಕಾರ್ಯ ಆರಂಭವಾಗಿದೆ. ರೈತರಿಗೆ ರಸಗೊಬ್ಬರ, ಬಿತ್ತನೆ ಬೀಜದ ಕೊರತೆಯಾಗದಂತೆ ನೋಡಿಕೊಳ್ಳಿ. ಮಣ್ಣಿನ ಫಲವತತ್ತತೆ ಕಡಿಮೆಯಾಗುತ್ತಿದೆ. ಅದನ್ನು ಹೆಚ್ಚಿಸಲು ಪ್ರತಿ 2 ವರ್ಷಕ್ಕೊಮ್ಮೆ ಮಣ್ಣಿನ ಪರೀಕ್ಷೆ ಮಾಡುವಂತೆ ಸೂಚನೆ ನೀಡಿದ ಮುಖ್ಯಮಂತ್ರಿಗಳು, ರೈತರಿಗೆ ಮಣ್ಣಿನ ಆರೋಗ್ಯ ಕಾರ್ಡ್‌ನ್ನು ಕಡ್ಡಾಯವಾಗಿ ನೀಡುವಂತೆ ತಾಕೀತು ಮಾಡಿದರು.

**ತ್ವರಿತ ವಿಲೇವಾರಿ**

ತಹಶೀಲ್ದಾರ್ ನ್ಯಾಯಾಲಯಗಳಲ್ಲಿ, ಉಪವಿಭಾಗಾಧಿಕಾರಿಗಳ ಬಳಿ ಸಾವಿರಾರು ಪ್ರಕರಣಗಳು ಬಾಕಿ ಇವೆ. 5 ವರ್ಷಕ್ಕೂ ಮೇಲ್ಪಟ್ಟ ಪ್ರಕರಣಗಳು ಹಾಗೆಯೇ ಉಳಿದಿವೆ. ಜಿಲ್ಲಾಧಿಕಾರಿಗಳ ಬಳಿಯೂ ಭೂ ಪ್ರಕರಣಗಳು ಬಾಕಿ ಇವೆ. ಕೂಡಲೇ ಇವುಗಳನ್ನು ವಿಲೇವಾರಿ ಮಾಡಿ ಎಂದು ಸೂಚಿಸಿದರು.

ಜನ ಜಿಲ್ಲಾಧಿಕಾರಿ, ಉಪವಿಭಾಗಾಧಿಕಾರಿ, ತಹಶೀಲ್ದಾರ್ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಿ, ಅಧಿಕಾರಿಗಳು ಜನರ ಕೈಗೆ ಸಿಗಬೇಕು. ಇಲ್ಲದಿದ್ದರೆ ಏನು ಪ್ರಯೋಜನ ಎಂದು ಪ್ರಶ್ನಿಸಿದರು.ಅಧಿಕಾರಿಗಳನ್ನು ಟೀಕೆ ಮಾಡಲು ನಾನು ಈ ಸಭೆ ಕರೆದಿಲ್ಲ. ಅಭಿವೃದ್ಧಿ ಯಾವ ರೀತಿ ನಡೆದಿದೆ ಎಂಬುದನ್ನು ಪರಿಶೀಲಿಸಲು ಈ ಸಭೆ ಕರೆದಿದ್ದೇನೆ. ನಾವು ಅನೇಕ ಜನಪರ ಕಾರ್ಯಕ್ರಮಗಳನ್ನು ಜಾರಿ ಮಾಡಿದ್ದೇವೆ. ಇವುಗಳು ಜನರಿಗೆ ತಲುಪಬೇಕು. ಆ ರೀತಿ ಕೆಲಸ ಮಾಡಿ. 40 ವರ್ಷಗಳಿಂದ ಅಧಿಕಾರಿಗಳ ಕಾರ್ಯವೈಖರಿ ಗಮನಿಸುತ್ತಿದ್ದೇನೆ. ರಾಜಕಾರಣಿಗಳು, ಅಧಿಕಾರಿಗಳ ಅನುಭವದ ಮೇಲೆ ಆಡಳಿತ ಹೆಚ್ಚು ಪರಿಣಾಮಕಾರಿಯಾಗಬೇಕು. ಆದರೆ ನಿರೀಕ್ಷಿತ ಮಟ್ಟದಲ್ಲಿ ಈ ಕೆಲಸ ಆಗಿಲ್ಲ ಎಂದು ಬೇಸರದಿಂದ ಹೇಳಿದರು.ಎಸ್ಸೆಸ್ಸೆಲ್ಸಿ ಪರೀ–ಕ್ಷೆಯ ಫಲಿತಾಂಶ ಕುಸಿದ ಬಗ್ಗೆಯೂ ಅಸಮಾಧಾನ ಹೊರ ಹಾಕಿದ ಮುಖ್ಯಮಂತ್ರಿಗಳು, ಪರೀಕ್ಷಾ ಅಕ್ರಮಗಳ ನಿಯಂತ್ರಣದಿಂದ ಫಲಿತಾಂಶ ಕುಸಿತವಾಗಿದೆ ಎಂಬ ಸಬೂಬು ಬೇಡ. ಫಲಿತಾಂಶ ಹೆಚ್ಚಿಸಲು ಕ್ರಮ ಕೈಗೊಳ್ಳಿ ಎಂದು ಹೇಳಿದರು.ಜನಸ್ಪಂದನ ಅರ್ಜಿಗಳನ್ನು ಸಕಾರಾತ್ಮಕವಾಗಿ ವಿಲೇವಾರಿ ಮಾಡಿ. ಬಡವರ ಬಗ್ಗೆ ಅನುಕಂಪ ಇಟ್ಟುಕೊಂಡು ಕೆಲಸ ಮಾಡಿ. ಅಸಮಾನತೆಯನ್ನು ನೀಗಿಸಲು ನಾವೆಲ್ಲಾ ಒಂದುಗೂಡಿ ಕೆಲಸ ಮಾಡಬೇಕಿದೆ. ಬಸವಣ್ಣ, ಗಾಂಧೀಜಿ, ಅಂಬೇಡ್ಕರ್‌ರವರನ್ನು ಓದುತ್ತೇವೆ, ಸಂವಿಧಾನವನ್ನು ಅರಿತುಕೊಳ್ಳಬೇಕು ಎಂದು ಹೇಳುತ್ತೇವೆ. ಇದು ಕೇವಲ ಓದುವುದಕ್ಕಲ್ಲ, ಅನುಷ್ಠಾನ ಮಾಡುವುದಕ್ಕೆ ಎನ್ನುವುದನ್ನು ಅರಿತುಕೊಳ್ಳಿ ಎಂದು ಅಧಿಕಾರಿಗಳಿಗೆ ಕಿವಿಮಾತು ಹೇಳಿದರು.ರಾಜ್ಯದಲ್ಲಿ ಕಲುಷಿತ ನೀರು ಸೇವಿಸಿ ಹಲವು ಸಾವು–ನೋವು ಸಂಭವಿಸಿದೆ. ಇಂತಹ ಪ್ರಕರಣಗಳು ಸಂಭವಿಸಿದರೆ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುತ್ತೇನೆ ಎಂದು ಹೇಳಿದ ಅವರು, ವಲಸೆ ಕುರಿಗಾರರ ಹಿತ ಕಾಪಾಡಿ. ವಲಸೆ ಕುರಿಗಳು ಆಕಸ್ಮಿಕವಾಗಿ ಮೃತಪಟ್ಟರೆ ಮಾಲೀಕರಿಗೆ ತ್ವರಿತ ಪರಿಹಾರ ನೀಡಿ ಎಂದರು.ಮಳೆಯ ಸಂದರ್ಭದಲ್ಲಿ ಭೂಕುಸಿತವಾಗುವ ಪ್ರದೇಶಗಳನ್ನು ಗುರುತಿಸಿ ಆ ಗ್ರಾಮದ ಜನರಿಗೆ ಶಾಶ್ವತ ಪರಿಹಾರ ಕೈಗೊಳ್ಳಿ. ಮಳೆಯಿಂದ ಮನೆ, ಬೆಳೆ ಹಾನಿ ಆಗಿರುವವರಿಗೆ ಕೂಡಲೇ ಪರಿಹಾರಗಳನ್ನು ನೀಡಿ. ಪಿಂಚಣಿ ಅರ್ಜಿಗಳನ್ನು 30 ದಿನದಲ್ಲಿ ವಿಲೇವಾರಿ ಮಾಡಿ ಎಂದು ಹೇಳಿದರು.ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಕಾನೂನು ಪ್ರಕಾರವೇ ಉದಾರತನದಿಂದ ವರ್ತಿಸಿ ತ್ವರಿತ ಪರಿಹಾರ ನೀಡಿ. ಸಣ್ಣಪುಟ್ಟ ತಾಂತ್ರಿಕ ಕಾರಣಗಳಿಗಾಗಿ ಆತ್ಮಹತ್ಯೆ ಪರಿಹಾರದ ಅರ್ಜಿಗಳನ್ನು ತಿರಸ್ಕರಿಸದೆ ರೈತ ಕುಟುಂಬಗಳಿಗೆ ಸಹಾಯ ಮಾಡಿ ಎಂದು ಹೇಳಿದರು.ಅರ್ಹರಿಗೆ ಬಿಪಿಎಲ್ ಕಾರ್ಡ್ ನೀಡಿ, ಅನರ್ಹರು ಬಿಪಿಎಲ್ ಕಾರ್ಡ್ ಪಡೆದಿದ್ದರೆ ಅವುಗಳನ್ನು ರದ್ದುಪಡಿಸಿ ಎಂದು ಹೇಳಿದ ಮುಖ್ಯಮಂತ್ರಿಗಳು, ರಾಜ್ಯದಲ್ಲಿ ಬರ ನಿರ್ವಹಣೆಯನ್ನು ಉತ್ತಮವಾಗಿ ಮಾಡಿದ್ದೀರಿ ಎಂದು ಅಧಿಕಾರಿಗಳನ್ನು ಶ್ಲಾಘಿಸಿದರು. ಮಳೆಗಾಲದಲ್ಲಿ ಯಾವುದೇ ಹಾನಿಯಾಗದಂತೆ ಎಚ್ಚರ ವಹಿಸಿ.

ಹವಾಮಾನ ಇಲಾಖೆಯೊಂದಿಗೆ ನಿಕಟ ಸಂಪರ್ಕದಲ್ಲಿದ್ದು ಪರಿಸ್ಥಿತಿ ನಿಭಾಯಿಸಿ ಎಂದು ಅವರು ಸೂಚಿಸಿದರು.ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೃಹ ಸಚಿವ ಡಾ. ಜಿ. ಪರಮೇಶ್ವರ್, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಕೃಷಿ ಸಚಿವ ಚಲುವರಾಯಸ್ವಾಮಿ, ಎಪಿಎಂಸಿ ಸಚಿವ ಶಿವಾನಂದ ಪಾಟೀಲ್, ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಸೇರಿದಂತೆ ಸರ್ಕಾರದ ಹಲವು ಸಚಿವರು, ಹಿರಿಯ ಅಧಿಕಾರಿಗಳು ಭಾಗಿಯಾಗಿದ್ದರು.

# ಜಗಳೂರು; ಕೆ.ಎಸ್. ಆರ್.ಟಿ.ಸಿ ಅಶ್ವಮೇಧ ಬಸ್ ಸಂಚಾರ: ಶಾಸಕ ಬಿ.ದೇವೇಂದ್ರಪ್ಪ

ಪಟ್ಟಣ ದಿನದಿಂದ ದಿನಕ್ಕೆ ವಿಸ್ತರಣೆ ಯಾಗುತ್ತಿದ್ದು.ಸರ್ಕಾರಿ ಜಾಗದ ಕೊರತೆ ಯಿದೆ.ಜಾಗ ಖರೀದಿಸಲು ಸರ್ಕಾರದ ಅನುದಾನದ ಕೊರತೆಯಿದೆ ಎಲ್ಲವ ನ್ನೂ ಸರಿಪಡಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು.

ಇದೀಗ ಬೆಳಿಗ್ಗೆ ವೇಳೆ ಬೆಂಗಳೂರಿಗೆ ತೆರಳಲು ಬಸ್ ಸಮಸ್ಯೆ ಹೊಂದಿದ್ದರಿಂದ ಅಧಿಕಾರಿಗಳ ಗಮನಕ್ಕೆ ತಂದ ಪರಿಣಾಮ ಕೂಡಲೇ ಪ್ರಯಾಣಿಕರ ಅನುಕೂಲಕ್ಕಾಗಿ ಅದು ಮೊದಲ ಬಾರಿಗೆ ಪ್ರತಿಷ್ಠಿತ ಅಶ್ವಮೇಧ ಬಸ್ ಸಂಚಾರ ಕಲ್ಪಿಸಲಾಗಿದೆ ಈ ಬಸ್ ಪ್ರತಿದಿನ ಬೆಳಿಗ್ಗೆ 5:25ಕ್ಕೆ ಜಗಳೂರು ನಿರ್ಗಮನವಾಗಿ 10:00 ಗಂಟೆಗೆ ಬೆಂಗ ಳೂರು ತಲುಪುತ್ತದೆ.ಹಾಗೂ ಸಂಜೆ 5:25ಕ್ಕೆ ಬೆಂಗಳೂರು ನಿರ್ಗಮನವಾಗಿ ರಾತ್ರಿ 10:00 ಗಂಟೆಗೆ ಜಗಳೂರಿ ಗೆ ಆಗಮಿಸುತ್ತದೆ ಎಂದು ತಿಳಿಸಿದರು.

ಕೆಪಿಸಿಸಿ ಎಸ್.ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ ಮಾತನಾಡಿ,ತಾಲೂಕಿನಲ್ಲಿ ತಡ ರಾತ್ರಿವೇಳೆ ಕೆಎಸ್ ಆರ್ ಟಿಸಿ ಬಸ್ ಸಂಚಾರವಿಲ್ಲದೆ ಪ್ರಯಾಣಿಕರು ಪರದಾಡುವಂತಾಗಿದೆ. ಹಂತಹಂತವಾಗಿ ಶಾಸಕರ ಸಹಕಾರದಿಂದ ಅಧಿಕಾರಿಗಳೊಂದಿ ಗೆ ಚರ್ಚಿಸಿ ಬಸ್ ಸೌಕರ್ಯ ಒದಗಿಸಲಾಗುವುದು.ಅಲ್ಲದೆ ಇದೀಗ ಮೊದಲ ಬಾರಿ ಪ್ರತಿಷ್ಠಿತ ಬಸ್ ಗಳಲ್ಲೊಂದಾಗಿರುವ ಅಶ್ವಮೇಧ ಬಸ್ ಸೌಲಭ್ಯ ಸಂತಸ ತಂದಿದೆ ಎಂದರು.

# ಆಶಾ ಕಾರ್ಯಕರ್ತರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ : ಜಿಲ್ಲಾಧ್ಯಕ್ಷ ವೀರೇಶ



ಲಿಂಗಸೂಗೂರ:–

ಅರೋಗ್ಯ ಸಂರಕ್ಷಣೆಯಲ್ಲಿ ತಮ್ಮ ಅರೋಗ್ಯವನ್ನು ಲೆಕ್ಕಿಸದೆ ಕೆಲಸ ಮಾಡುತ್ತಿರುವ ಆಶಾ ಕಾರ್ಯಕರ್ತರನ್ನು ಸರಕಾರಿ ನೌಕರರೆಂದು ಪರಿಗಣಿಸಬೇಕು ಎಂದು ಎ ಐ ಯು ಟಿ ಯು ಸಿ ಜಿಲ್ಲಾಧ್ಯಕ್ಷ ವೀರೇಶ ಹೇಳಿದರು.

ಪಟ್ಟಣದ ಗುರು ಭವನದಲ್ಲಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಲಿಂಗಸೂಗೂರ ತಾಲೂಕಿನ ಆಶಾ ಕಾರ್ಯಕರ್ತರ ಪ್ರಥಮ ಸಮ್ಮೇಳನದಲ್ಲಿ ಮಾತನಾಡಿದ ಅವರು 2008–09 ನೇ ಸಾಲಿನಲ್ಲಿ ಒಂದು ಸಾವಿರ ಜನಕ್ಕೆ ಒಬ್ಬ ಕಾರ್ಯಕರ್ತೆಯಂತೆ ಕೇವಲ 2 ತಾಸು ಅವಧಿ ಮಾತ್ರ ಕೆಲಸ ಮಾಡಬೇಕು ಎಂದು ನೇಮಕ ಮಾಡಿಕೊಂಡಿರುವ ಸರ್ಕಾರ ಇಂದು ದಿನದ 24 ಗಂಟೆಯು ಕೆಲಸ ಮಾಡಿಸಿಕೊಳ್ಳುತ್ತಿದೆ.

ಜನರ ಕೆಲಸ ದೇವರ ಕೆಲಸ ಎಂದು ನಂಬಿದ ಆಶಾ ಕಾರ್ಯಕರ್ತರು ಯಾವುದೇ ತುರ್ತು ಪರಿಸ್ಥಿತಿಯ ಸಾಂಕ್ರಾಮಿಕ ರೋಗಗಳು ಬಂದರು ತಮ್ಮ ಅರೋಗ್ಯದ ಬಗ್ಗೆ ಲೆಕ್ಕಿಸದೆ ಕೆಲಸ ಮಾಡುತ್ತಾರೆ, ಕರೋನ ಸಮಯದಲ್ಲಿ ಎಲ್ಲರು ಜೀವಕ್ಕೆ ಹೆದರಿ ಮನೆಯಲ್ಲಿ ಕೂತಾಗ ಜನರ ರಕ್ಷಣೆ ಗೆ ಸೈನಿಕರಂತೆ ಕೆಲಸ ಮಾಡಿದ್ದಾರೆ. ಆಶಾ ಕಾರ್ಯಕರ್ತರು ಕೊಡುವ ಸೇವೆಯಿಂದ ಗರ್ಭಿಣಿ ಶಿಶು ಮರಣಗಳು ಕಡಿಮೆಯಾಗಿವೆ, ಅರೋಗ್ಯ ಕ್ಷೇತ್ರದ ನಾಯಕಿಯರು ಆಶಾ ಕಾರ್ಯಕರ್ತರು.

ಆಶಾ ಕಾರ್ಯಕರ್ತರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಇಲ್ಲ ಅಲ್ಲಿಯವರೆಗೂ ಕಾರ್ಮಿಕರೆಂದು ಪರಿಗಣಿಸಿ, ಶಾಸನ ಬದ್ಧ ಸೌಲಭ್ಯಗಳನ್ನು ನೀಡಿ, ಸಾಮಾಜಿಕ ಭದ್ರತೆ ಖಾತ್ರಿ ಪಡಿಸಬೇಕು. ತಾಲೂಕಿನಲ್ಲಿ 15 ಪ್ರಾಥಮಿಕ ಅರೋಗ್ಯ ಕೇಂದ್ರಗಳು ಇದ್ದು 300 ಜನ ಆಶಾ ಕಾರ್ಯಕರ್ತರು ಇದ್ದಾರೆ ಜಿಲ್ಲೆಯಲ್ಲೇ ಅತೀ ಹೆಚ್ಚು ಆಶಾ ಕಾರ್ಯಕರ್ತರು ಇರುವ ತಾಲೂಕು ಇದಾಗಿದೆ. ನಮ್ಮ ಬೇಡಿಕೆಗಳು ಈಡೇರಬೇಕಾದರೆ ಹೋರಾಟಕ್ಕೆ ಸಿದ್ದರಾಗಬೇಕು.

ತಾಲೂಕ, ಜಿಲ್ಲಾ ಮತ್ತು ರಾಜ್ಯ ಮಟ್ಟದ ಸಮ್ಮೇಳನ ಗಳನ್ನು ಹಮ್ಮಿಕೊಂಡಿದ್ದು ಮುಂ ದಿನ ದಿನಗಳಲ್ಲಿ ಹೋರಾಟ ರೂಪಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಗೌರವಧ್ಯಕ್ಷ ಶರಣಪ್ಪ ಉದ್ಭಳ, ಮಹೇಶ, ಶಾಂತ ಹಟ್ಟಿ,ನವಿನಾ,ದೇವಮ್ಮ ಸೇರಿದಂತೆ ಆಶಾ ಕಾರ್ಯಕರ್ತರು ಇದ್ದರು.

# ಮಠದ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ

ಮುದಗಲ್:–

ಸಮೀಪದ ಸಜ್ಜಲಗುಡ್ಡದ ಮಠ ಉಚಿತ ಪ್ರಸಾದ ನಿಲಯದ ವಿದ್ಯಾರ್ಥಿಗಳಿಗೆ ನಾಗರಾಳ ಹೈದರಾಬಾದ್ ಬಾಬುರಾವ ಶಾಸ್ತ್ರೀ ಸಮವಸ್ತ್ರ, ಬೆಡ್ ಶೀಟ್ ಗಳನ್ನು ನೀಡಿದರು.

ನಂತರ ನಡೆದ ಕಾರ್ಯಕ್ರಮದಲ್ಲಿ ಬಾಬುರಾವ ಶಾಸ್ತ್ರೀ ಮಾತನಾಡುತ್ತ 'ಶ್ರೀಮಠ ಬಡ ವಿದ್ಯಾರ್ಥಿಗಳಿಗೆ ಅನೇಕ ದಶಕಗಳಿಂದ ಉಚಿತ ವಸತಿ ಪ್ರಸಾದ ನೀಡಿದೆ.

ಈ ಭಾಗದ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದೆ. ಬಡ ಮಕ್ಕಳಿಗೆ ಜ್ಞಾನ ಅನ್ನದಾಸೋಹದ ಮೂಲಕ ಶೈಕ್ಷಣಿಕ ಕ್ರಾಂತಿ ಮಾಡಿದ ಮಠವಾಗಿದೆ' ಎಂದರು. ಮಠಾಧ್ಯಕ್ಷರು ದೊಡ್ಡ ಬಸವಾರ್ಯ ತಾತನವರು ಇದ್ದರು.

# ಚರಂಡಿ ಅಸ್ವಚ್ಛತೆಯಿಂದ ನಾಗರೀಕರಲ್ಲಿ ಅನಾರೋಗ್ಯ : ಕಣ್ಮುಚ್ಚಿ ಕುಳಿತ ಶಿವಮೊಗ್ಗ ಪಾಲಿಕೆ ಆಡಳಿತ!

ನಿಯಂತ್ರಣಕ್ಕೆ ಆದ್ಯ ಕ್ರಮಕೈಗೊಳ್ಳುವಂತೆ ರಾಜ್ಯ ಸರ್ಕಾರ ಸೂಚಿಸಿದೆ. ಆದರೆ ನಮ್ಮ ಪ್ರದೇಶದಲ್ಲಿ ಕನಿಷ್ಠ ಚರಂಡಿ ಸ್ವಚ್ಚತೆಗೆ ಕ್ರಮಕೈಗೊಳ್ಳುವಂತೆ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಆಡಳಿತದ ಈ ಧೋರಣೆ ಖಂಡನಾರ್ಹವಾದುದಾಗಿದೆ' ಎಂದು ಗಾಡಿಕೊಪ್ಪದ ಮೈಸೂರು ಬೀದಿ ನಿವಾಸಿಗಳು ಅಸಮಾಧಾನ ವ್ಯಕ್ತಪಡಿಸುತ್ತಾರೆ.ಇನ್ನಾದರೂ ಪಾಲಿಕೆ ಆಡಳಿತ ಅವ್ಯವಸ್ಥೆ ಸರಿಪಡಿಸಲು ಮುಂದಾಗಬೇಕಾಗಿದೆ. ನೂತನ ಪಾಲಿಕೆ ಆಯುಕ್ತರು ಜನಸಾಮಾನ್ಯರ ಅಹವಾಲುಗಳಿಗೆ ಸ್ಪಂದಿಸದ ತಮ್ಮ ಕೆಳಹಂತದ ಅಧಿಕಾರಿ, ಸಿಬ್ಬಂದಿಗಳ ವಿರುದ್ದ ನಿರ್ದಾಕ್ಷಿಣ್ಯ ಕ್ರಮಕೈಗೊಳ್ಳಬೇಕಾಗಿದೆ ಎಂದು ನಾಗರೀಕರು ಆಗ್ರಹಿಸುತ್ತಾರೆ.

# ಸಮರ್ಪಣಾ ಭಾವದಿಂದ ವೃತ್ತಿಯಲ್ಲಿ ಯಶಸ್ಸು

ಈ ನಿಟ್ಟಿನಲ್ಲಿ ಮಂಜನಾಥ್ ತಮ್ಮ ಸೇವಾವಧಿಯಲ್ಲಿ ಉತ್ತಮ ಕಾರ್ಯ ಮಾಡಿದ್ದಾರೆ ಎಂದು ಶ್ಲಾಘಿಸಿದರು. ಹಿರಿಯ ಉಪನ್ಯಾಸಕರಾದ ಎಸ್.ಸಿ.ಪ್ರಸಾದ್, ಎಸ್.ಜ್ಞಾನೇಶ್ವರ, ತಿಪ್ಪೇಸ್ವಾಮಿ, ಪೂರ್ಣಿಮಾ, ಗಿರಿಜ, ಉಪನ್ಯಾಸಕರಾದ ಆರ್.ನಾಗರಾಜು, ಕೆ.ಜಿ.ಪ್ರಶಾಂತ್, ಎಸ್.ಬಸವರಾಜು, ಎನ್.ರಾಘವೇಂದ್ರ, ಯು.ಸಿದ್ದೇಶಿ, ಸಿ.ಎಸ್.ಲೀಲಾವತಿ, ನಿತ್ಯಾನಂದ, ಕನಕಮ್ಮ, ರೇವಣ್ಣ, ರಂಗಸ್ವಾಮಿ, ತಾಂತ್ರಿಕ ಸಹಾಯಕರಾದ ಲೋಕೇಶ್, ಲಿಂಗರಾಜು, ವಿಷಯ ಪರಿವೀಕ್ಷಕ ಚಂದ್ರಣ್ಣ, ಸಿ.ಆರ್.ಪಿ ವರಲಕ್ಷಿ ಮತ್ತು ಕಚೇರಿ ಸಿಬ್ಬಂದಿ ವರ್ಗದವರು ಇದ್ದರು.

## ತರಬೇತಿಯಿಲ್ಲದ ಶಿಕ್ಷಕರು,ಉಪನ್ಯಾಸಕರ ನೇಮಕ

# ಖಾಸಗಿ ಶಾಲಾ ಕಾಲೇಜಿನ ಆಡಳಿತ ವೈಖರಿಗೆ ಖಂಡನೆ

ಆರೋಪಿಸಿದರು.

ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಅವರ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಖಾಸಗಿ ಶಾಲಾ ಕಾಲೇಜುಗಳಿಗೆ ವಿಚಾರಣೆಯ ಭೇಟಿ ನೀಡಬೇಕು ಜೊತೆಗೆ ದಾಖಲೆಗಳನ್ನು, ಹಾಜರಿ ಪುಸ್ತಕವನ್ನು ವಿದ್ಯಾರ್ಹತೆಗಳನ್ನು, ವಿದ್ಯಾರ್ಥಿಯ ಸಂಚಿತ ದಾಖಲೆಗಳನ್ನು ಪರಿಶೀಲಿಸಿ ಸರಿಯಾಗಿ ನಿರ್ವಹಣೆ ಮಾಡದಿರುವ ಸಂಸ್ಥೆಗಳ ಮೇಲೆ ಸೂಕ್ತ ಶಿಸ್ತು ಕ್ರಮವನ್ನು ತೆಗೆದುಕೊಂಡು ಈಗಿನ ಎಲ್ಲಾ ಮಕ್ಕಳಿಗೆ ಮತ್ತು ಮುಂಬರುವ ಮಕ್ಕಳಿಗೆ ಉತ್ತಮ ಶೈಕ್ಷಣಿಕ ವ್ಯವಸ್ಥೆಯನ್ನು ಕಲ್ಪಿಸಿ ಕೊಡಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ಎಸ್. ಅರುಣ್ ಕುಮಾರ್,ವಕ್ತಾರ ಕೆ.ಜಿ ಚಂದ್ರು, ಉಪಾಧ್ಯಕ್ಷ ಪ್ರಕಾಶ್ ಎಸ್,ಅರವಿಂದಾಕ್ಷ ಉಪಸ್ಥಿತರಿದ್ದರು.

# ಭಾರತ್ ಅಕ್ಕಿ ಸ್ಥಗಿತ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

ಯೋಜನೆಯನ್ನು ಪುನರ್ ಪ್ರಾರಂಭಿಸಬೇಕು ಎಂದು ಒತ್ತಾಯಿಸಿದರು.ಜನರಿಗೆ ಮರಳು ಮಾಡಲು ಸರ್ಕಲ್ ಗಳಲ್ಲಿ ಭಾರತ್ ಅಕ್ಕಿ ಪೂರೈಕೆ ಮಾಡಿದ ಬಿಜೆಪಿ ಯವರು ಈಗ ನಿಲ್ಲಿಸಿದ್ದಾರೆ. ಹದಿನೈದು ದಿನಗಳಲ್ಲಿ ಭಾರತ್ ಅಕ್ಕಿ ವಿತರಣೆ ಮಾಡಬೇಕು. ಇಲ್ಲವಾದಲ್ಲಿ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲಾಗುವುದು. ಧೈರ್ಯ ಇದ್ದರೆ ಅಕ್ಕಿ ಪೂರೈಕೆ ಮಾಡಬೇಕು. ಕೇಂದ್ರ ಸರ್ಕಾರದಂತೆ ಯಾವುದೇ ಕಾರಣಕ್ಕೆ ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆ ನಿಲ್ಲುವುದಿಲ್ಲ ಎಂದು ತಿಳಿಸಿದರುಪ್ರತಿಭಟನೆಯಲ್ಲಿ ಎಸ್. ಮಲ್ಲಿಕಾರ್ಜುನ್, ಗಡಿಗುಡಾಳ್ ಮಂಜುನಾಥ್,ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಅನಿತಾಬಾಯಿ, ಮೇಯರ್ ಬಿ.ಎಚ್. ವಿನಾಯಕ ಪೈಲ್ವಾನ್, , ಬಿ. ಚಮನ್ ಸಾಬ್, ಮೀನಾಕ್ಷಿ ಜಗದೀಶ್, ಅಬ್ದುಲ್ ಲತೀಫ್, ಯುವರಾಜ್, ಕೆ.ಜಿ. ಶಿವಕುಮಾರ್ ಇತರರು ಇದ್ದರು.

# ಪರಿಸರ ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯ

ವೇದಿಕೆಯಿಂದ ರಸ್ತೆಗಳ ಅಕ್ಕಪಕ್ಕ, ಶಾಲಾ ಕಾಲೇಜು ಆವರಣ, ಪಾರ್ಕ್, ಮನೆಗಳ ಮುಂಬಾಗ ಸೇರಿದಂತೆ ವಿವಿಧೆಡೆ ಬನ್ನಿ, ಬೇಲ, ಆಲ, ಅರಳಿ, ದೋರಹುಣಸೆ, ಮಹಾಗನಿ, ಹೊಂಗೆ, ಸಂಪಿಗೆ, ಬಸರಿ, ಬಿಲ್ವ, ಹತ್ತಿ, ಬೆಟ್ಟದ ನಲ್ಲಿ ಸೇರಿದಂತೆ ಸುಮಾರು ಇಲ್ಲಿವರೆಗೆ 37 ಸಾವಿರಕ್ಕೂ ಹೆಚ್ಚು ಗಿಡಗಳನ್ನು ನೆಟ್ಟಿದ್ದೇವೆ. ಉತ್ತಮವಾಗಿ ಗಿಡಮರಗಳು ಬೆಳೆದರೆ ಮನುಷ್ಯನಿಗೆ ಉಚಿತವಾಗಿ ಆಮ್ಲಜನಕ ಸಿಗುತ್ತದೆ. ಇದರಿಂದ ಯಾವುದೇ ರೋಗ ರುಜಿನೆಗಳು ಬರುವುದಿಲ್ಲ. ವಾತಾವರಣ ಕೂಡಾ ತಂಪಾಗಿರುತ್ತದೆ. ಅಲ್ಲದೇ ಕಾಶಿ, ಉಡುಪಿ, ಅಯೋಧ್ಯೆಯಲ್ಲಿಯೂ ಸಹಾ ಇಲ್ಲಿಂದ ಗಿಡಗಳನ್ನು ತೆಗೆದುಕೊಂಡು ಹೋಗಿ ನೆಟ್ಟಿದ್ದೇವೆ. ಈ ಭಾಗದ ಜನತೆ ನಮ್ಮ ಈ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದರು. ಈ ಸಂದರ್ಭದಲ್ಲಿ ಕರುಣಾ ಟ್ರಸ್ಟ್ ಶಿವನಕೆರೆ ಬಸವಲಿಂಗಪ್ಪ, ಎ.ಎಂ.ಕೊಟ್ರೇಶ್ವರ, ಡಾ.ಶಾಂತಾಭಟ್, ಡಾ.ಶ್ರೀಪಾದಭಟ್, ಎಸ್.ಓಂಕಾರಪ್ಪ, ಡಾ.ಶಿಶುಪಾಲ, ಗೀತಾ ಬದರಿನಾಥ, ಜಯಂತಿಮಾಲ, ವಾಣಿ ವಸಂತ, ಲಕ್ಷಿ , ಮಮತಾ, ಅರ್ಚನಾ ಸಾಯಿಪ್ರಸಾದ, ಸ್ವಾತಿ, ಸಾಹಿತ್ಯ, ರಾಧಿಕಾ, ಸೌಮ್ಯ ಸತೀಶ, ಶ್ರೀದೇವಿ, ಸುಷ್ಮಾ ರವಿಶಂಕರ, ಪೂರ್ಣಿಮ, ಗೌರಮ್ಮ, ಡಾ.ರಾಮಪ್ಪ, ಡಾ.ನಿರಂಜನ್ ಸೇರಿದಂತೆ ಸ್ಥಳೀಯ ನಿವಾಸಿಗಳು ಭಾಗವಹಿಸಿದ್ದರು.

# ಮೂವರ ಮೇಲೆ ದಾಳಿ ನಡೆಸಿದ್ದ ಚಿರತೆ; ಕಂಡ ಕ್ಷಣವೇ ಅಟ್ಟಾಡಿಸಿ ಕೊಚ್ಚಿ ಕೊಂದ ಗ್ರಾಮಸ್ಥರು

ರಾಯಚೂರು:–

ಜಿಲ್ಲೆಯ ದೇವದುರ್ಗ ತಾಲೂಕಿನ ಕಮದಾಳ ಗ್ರಾಮದಲ್ಲಿ ಚಿರತೆ ಪ್ರತ್ಯಕ್ಷವಾಗಿದ್ದು, ಸುತ್ತಮುತ್ತಲಿನ ಸಾವಿರಾರು ಗ್ರಾಮಸ್ಥರು ಬೆಟ್ಟದಲ್ಲಿ ಚಿರತೆಯನ್ನ ಪತ್ತೆ ಹಚ್ಚಿ ಹೊಡೆದು ಕೊಂದ ಘಟನೆ ನಡೆದಿದೆ.

ಗ್ರಾಮದಲ್ಲಿ ಚಿರತೆ ಪ್ರತ್ಯಕ್ಷವಾಗಿರುವ ಮಾಹಿತಿ ತಿಳಿದು ಸ್ಥಳಕ್ಕೆ ಬಂದಿದ್ದ ಅರಣ್ಯ ಇಲಾಖೆ ಸಿಬ್ಬಂದಿ, ಪೊಲೀಸರು, ಆದರೆ ಬೆಟ್ಟದಲ್ಲಿ ಚಿರತೆ ಕಾಣಿಸಿರುವ ವಿಚಾರ ತಿಳಿದು ಕಮದಾಳ ಗ್ರಾಮಸ್ಥರು ನೆರೆಹೊರೆಯ ಸಾವಿರಾರು ಜನರು ಆಗಮಿಸಿದ್ದಾರೆ.

ಬೆಟ್ಟದ ಮೇಲೆ ತಂಡೋಪತಂಡವಾಗಿ ನುಗ್ಗಿ ಚಿರತೆಗಾಗಿ ಹುಡುಕಾಟ ನಡೆಸಿದ್ದ ಜನರು ಜಮೀನಿಗೆ ತೆರಳಿದ್ದ ಮೂವರು ರೈತರ ಮೇಲೆ ಚಿರತೆ ದಾಳಿ ಮಾಡಿತ್ತು.

ಇದರಿಂದ ಗಂಭೀರ ಗಾಯಗೊಂಡಿದ್ದ ಮೂವರು ರೈತರು.

ಅರಣ್ಯ ಇಲಾಖೆ ಸಿಬ್ಬಂದಿಗೆ ಮೊದಲೇ ತಿಳಿಸಿದರೂ ಪ್ರಯೋಜನವಾಗಿ ಎಂದು ತಾವೇ ಚಿರತೆ ಹಿಡಿಯಲು ಮುಂದಾಗಿದ್ದ ಗ್ರಾಮಸ್ಥರು. ಚಿರತೆ ಕಾಣಿಸುತ್ತಿದ್ದಂತೆ ರೊಚ್ಚಿಗೆದ್ದ ನೂರಾರು ಜನರು ಕಟ್ಟಿಗೆ, ಕಲ್ಲು ಬಡಿಗೆಗಳೊಂದಿಗೆ ಏಕಕಾಲಕ್ಕೆ ಚಿರತೆ ಮೇಲೆ ಅಟ್ಯಾಕ್ ಮಾಡಿ ಕೊಂದ ಗ್ರಾಮಸ್ಥರು.

ಅರಣ್ಯ ಅಧಿಕಾರಿಗಳು ಇದ್ದರೂ ಚಿರತೆ ರಕ್ಷಣೆ ಮಾಡಲು ಆಗಲಿಲ್ಲ.

ಅರಣ್ಯ ಸಿಬ್ಬಂದಿ, ಪೊಲೀಸರ ಎದುರಲ್ಲೇ ರೊಚ್ಚಿಗೆದ್ದ ನೂರಾರು ಜನರು ಚಿರತೆಯನ್ನ ಹೊಡೆದು ಕೊಂದಿದ್ದಾರೆ.

ಈ ವೇಳೆ ಜನರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಡಬೇಕಾಯಿತು. ಲಘು ಲಾಠಿಪ್ರಹಾರ ನಡೆಸಿದರು ಜನರು ಕದಲಿಲ್ಲ. ಚಿರತೆ ಕೊಂದ ಬಳಿಕ ಪಶು ಅಂಬುಲೆನ್ಸ್‌ನಲ್ಲಿ ಹಾಕಿದ ಗ್ರಾಮಸ್ಥರು.

ಚಿರತೆ ಹಿಡಿಯುವಲ್ಲಿ ಅಸಹಾಯಕರಾಗಿದ್ದ ಅರಣ್ಯ ಇಲಾಖೆ ಸಿಬ್ಬಂದಿ, ಅಧಿಕಾರಿಗಳು, ಚಿರತೆ ಕಾಣಿಸಿರುವ ಬಗ್ಗೆ ಅರಣ್ಯ ಇಲಾಖೆಗೆ ಮುಂಚಿತವಾಗಿಯೇ ತಿಳಿಸಿದ್ದರು ಅರಣ್ಯ ಇಲಾಖೆ ನಿರ್ಲಕ್ಷ್ಯ ಮಾಡಿದ ಎಂಬ ಆರೋಪ ಕೇಳಿಬಂದಿದೆ.

ಈ ಹಿನ್ನೆಲೆ ಗ್ರಾಮಸ್ಥರೇ ಚಿರತೆ ಮೇಲೆ ಅಟ್ಯಾಕ್ ಮಾಡಿ ಕೊಂದಿದ್ದಾರೆ.

# ಜೆಡಿಎಸ್ ಪಕ್ಷದಿಂದ ಕೇಂದ್ರ ಸಚಿವ ಹೆಚ್‌ಡಿಕೆಗೆ ಸನ್ಮಾನ



ಮುದಗಲ್:– ಕೇಂದ್ರ ಸರ್ಕಾರದ ಉಕ್ಕು ಮತ್ತು ಭಾರೀ ಕೈಗಾರಿಕೆ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ರವರಿಗೆ ಜಾತ್ಯತೀತ ಜನತಾ ದಳ ಪಕ್ಷದ ಲಿಂಗಸುಗೂರ ತಾಲೂಕಾಧ್ಯಕ್ಷ ಬಸವ ರಾಜ ಮಾಕಾಪೂರು ನೇತೃತ್ವದಲ್ಲಿ ಹೂ ಗುಚ್ಛ ನೀಡುವ ಸನ್ಮಾನ ಮಾಡಿ ಅಭಿನಂದಿಸಿದರು. ಬೆಂಗಳೂರಿನ ಜೆಡಿಎಸ್ ಕಚೇರಿಯಲ್ಲಿ ಲಿಂಗಸುಗೂರ ತಾಲ್ಲೂಕ ಘಟಕದ ವತಿಯಿಂದ ಸನ್ಮಾನ ಮಾಡಿ ನಂತರ ತಾಲ್ಲೂಕಿನ ಪಕ್ಷ ಸಂಘಟನೆ ಹಾಗೂ ಮುಂದಿನ ತಾಲ್ಲೂಕ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆ ಬಗ್ಗೆ ಕೇಂದ್ರ ಸಚಿವರ ಜೊತೆ ಚರ್ಚೆ ಮಾಡಿದ್ದಾರೆ ಎಂದು ತಿಳಿದು ಬಂದಿದೆ.

# ಜು.10ರಂದು ವಿದ್ಯುತ್ ವ್ಯತ್ಯಯ

ರಾಯಚೂರು:–

ಇಲ್ಲಿಯ ಗ್ರಾಮೀಣ ಉಪ ವಿಭಾಗದ ಶಕ್ತಿನಗರ ಶಾಖೆ–ಯ ಚಿಕ್ಕಸೂಗೂರು 110/11ಕೆ.ವಿ ವ್ಯಾಪ್ತಿಗೆ ಬರುವ ಸಿ–10ಸಿಎಮ್‌ಸಿ ಫೀಡರ್‌ನಲ್ಲಿ ತುರ್ತು ನಿರ್ವಹಣ ಕೆಲಸದ ನಿಯಿತ್ತ ಇದೇ 2024ರ ಜು.10ರ ಬೆಳಿಗ್ಗೆ 9ಗಂಟೆಯಿಂದ ಸಂಜೆ6ಗಂಟೆಯುರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಸಹಕರಿಸಬೇಕು ಎಂದು ಜೆಸ್ಕಾಂನ ರಾಯಚೂರು ಗ್ರಾಮೀಣ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಲ್ಪನೆ

ಎನ್ನ ಮನದ ಮುಗಿಲಲ್ಲಿ
ನೀ ಮಿಂಚು ಸಿಡಿಲಾಗಿ
ಮಳೆಯ ಹನಿಯಾಗಿ
ಆ ರಭಸಕ್ಕೆ ನಾನು
ನದಿಯಾಗುವೆ....
ಬೆಟ್ಟ ಗುಡ್ಡಗಳ ನಡುವೆ ಝು–
ರಿಯಾಗಿ ಗಿಡ ಮರಗಳಿಗೆ
ಜೀವನಾಧಾರವಾಗಿ
ಪ್ರಾಣಿ ಪಕ್ಷಿಗಳಿಗೆ ಅನು
ಕೂಲವಾಗಿ ನೀನು
ನಾನಾಗಿ ಮಾನವ ಕುಲಕ್ಕೆ
ದಾನವಾಗುವೆ...
ನಿನ್ನ ಕಲ್ಪನೆ ಇಲ್ಲದೆ
ನಾನು ನಶ್ವರವಾಗಿ
ಜೀವನವೆ ಮರೀಚಿಕೆಯಾಗಿ
ಕೊನೆಗೊಮ್ಮೆ ಜಡವಾಗುವೆ...

– ಡಾ.ವ್ಹಿ. ವ್ಹಿ. ಹಿರೇಮಠ

# ಭಾರತ್ ಅಕ್ಕಿ ಸ್ಥಗಿತ ಕಾಂಗ್ರೆಸ್ ಆಕ್ರೋಶ



ಬೆಂಗಳೂರು:–

ಲೋಕಸಭಾ ಚುನಾವಣೆಯಲ್ಲಿ ಕೇವಲ ಜನರಿಂದ ಮತ ಪಡೆಯಲು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರ ಭಾರತ್ ಅಕ್ಕಿ ಯೋಜನೆಯನ್ನು ಜಾರಿಗೆ ತಂದು ಇಂದು ಈ ಯೋಜನೆಯನ್ನು ಸ್ಥಗಿ–ತಗೊ ಳಿಸಿರುವುದು ಜನತೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಬಗೆದ ದ್ರೋಹವಾಗಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ತಿಳಿಸಿದ್ದಾರೆ. ನಗರದ ಗಾಂಧಿ ಪ್ರತಿಮೆ ಬಳಿ ಇಂದು ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಕರ್ನಾಟಕದಲ್ಲಿ ಐದು ಯೋಜನೆಗಳನ್ನು ಕಾಂಗ್ರೆಸ್ ಪಕ್ಷ ಜಾರಿಗೆ ತಂದು ಕೋಟ್ಯಾಂತರ ಫಲಾನುಭವಿಗಳಿಗೆ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದು ಎಲ್ಲ ಯೋಜನೆಗಳನ್ನು ಜಾರಿಗೊ ಳಿಸಿದೆ ಆದರೆ ಕೇವಲ ಒಂದು ಯೋಜನೆಯನ್ನು ಜಾರಿಗೆ ತಂದ ಬಿಜೆಪಿ ಸರ್ಕಾರ ಅಕ್ಕಿ ಯೋಜನೆಯನ್ನು ಕೇವಲ ನಾಲ್ಕು ತಿಂಗಳ ಅವಧಿಯಲ್ಲಿ ರದ್ದುಗೊಳಿಸಿರುವುದು ನರೇಂದ್ರ ಮೋದಿಯ ದುರಾಡಳಿತ ಹಾಗೂ ನರೇಂದ್ರ ಮೋದಿಯ ಸುಳ್ಳಿನ ಆಶ್ವಾಸನೆಗೆ ಮತ್ತೊಂದು ಸುಳ್ಳು ಸಾಕ್ಷಿಯಾಗಿದೆ, ಕರ್ನಾಟಕ ರಾಜ್ಯದ ಬಿಜೆಪಿ ನಾಯಕರು ಕಾಂಗ್ರೆಸ್ ಸರ್ಕಾರದ ಜನಪ್ರಿಯತೆಯನ್ನು ಸಹಿಸದೆ ಸುಳ್ಳು ಆರೋಪಗಳನ್ನು ಮಾಡಿ ಪ್ರತಿಭಟನೆ ಮಾಡುತ್ತಿದೆ ಆದ–ರೆ ಬಿಜೆಪಿಯ ಭೂಗಳ್ಳರು ಸರ್ಕಾರಿ ಜಮೀನನ್ನು ನುಂಗಿ ಇಂದು ಆಧಾರ ರಹಿತ ಆರೋಪ ಮಾಡುತ್ತಿರುವುದು ಅತ್ಯಂತ ಅಪಹಾಸ್ಯವಾಗಿದೆ, ಬಿಜೆಪಿ ನಾಯಕರಿಗೆ ನೈತಿಕತೆ ಇದ್ದರೆ ಯಾವ ವಿಷಯದ ಬಗ್ಗೆ ಹೋರಾಟ ನಡೆಸುತ್ತಿದ್ದೇವೆ ಎಂಬ ಪರಿಜ್ಞಾನವೂ ಇಲ್ಲ ಬಿಜೆಪಿ ಆಡಳಿತದಲ್ಲಿ ನಡೆದ ಅಕ್ರಮವನ್ನು ಬಿಜೆಪಿ ಪಕ್ಷದವರೇ ಇಂದು ಹೊರತರುತ್ತಿರುವುದು ಬಿಜೆಪಿಯ ಭ್ರಷ್ಟಾಚಾರಕ್ಕೆ ಮತ್ತೊಂದು ಸಾಕ್ಷಿಯಾಗಿದೆ, ಕೇಂದ್ರ ಸಚಿವರಾದ ಎಚ್.ಡಿ. ಕುಮಾರಸ್ವಾಮಿ ರವರು ಸತ್ಯ ಹರಿಶ್ಚಂದ್ರನ ರೀತಿ ಹೇಳಿಕೆ ನೀಡುತ್ತಿದ್ದಾರೆ. ಬಳ್ಳಾರಿಯ ದೇವದಾರಿ ಗಣಿಗಾರಿಕೆಗೆ ಅವಕಾಶ ನೀಡಿ ರಾಜ್ಯದ ಖನಿಜ ಸಂಪತ್ತನ್ನು ಲೂಟಿ ಮಾಡಲು ಮುಂದಾಗಿರುವ ಕುಮಾರಸ್ವಾಮಿ ರವರು ಮಾನ್ಯ ಮುಖ್ಯಮಂತ್ರಿಗಳ ವಿರುದ್ಧ ಮೂಡ ವಿಷಯದ ಬಗ್ಗೆ ಮಾಡಿರುವ ಟೀಕೆ ಬಿಜೆಪಿಯವರ ಭ್ರಷ್ಟಾಚಾರವನ್ನು ಬೆಂಬಲಿಸಿರುವುದು ಸಾಬೀತಾಗಿದೆ, ಪ್ರಸ್ತುತ ಹೋರಾಟ ನಡೆಸುತ್ತಿರುವ ಬಿಜೆಪಿ ನಾಯಕರು ಅಕ್ರಮ ಭೂಕಬಳಿಕೆ ಆರೋಪವನ್ನು ಹೊತ್ತಿ ಈಗಾಗಲೇ ಆರೋಪ ಸ್ಥಾನದಲ್ಲಿ ನಿಂತಿರುವವರು ಈಗ ಪ್ರಾಮಾಣಿಕರಂತೆ ಹೋರಾಟ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು. ಈ ಪ್ರತಿಭಟನೆಯಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾದ ಎಸ್. ಮನೋಹರ್, ಮುಖಂಡರುಗಳಾದ ಸುಧಾ–ಕರ್, ಪ್ರಕಾಶ್, ಚೇತನ್, ರಂಜಿತ್, ಚಂದ್ರಶೇಖರ, ಪುಟ್ಟರಾಜು, ಹಾಗೂ ಕಾಂಗ್ರೆಸ್ ಕಾರ್ಯಕರ್ತರ ಭಾಗವಹಿಸಿದ್ದರು.

# ಆನ್‌ಲೈನ್ ವಂಚನೆಗೆ ಮೋಸ ಹೋಗದೆ ಜಾಗೃತರಾಗಿರಿ: ಅಣ್ಣಿಗೇರಿ




ವಿಜಯಪುರ,ಜು.7:

ದೇಶದಲ್ಲಿ ಸೈಬರ್ ಕ್ರೈಂ, ಆನಲೈನ್ ವಂಚನೆ, ಸುಳ್ಳು ಸಂದೇಶ ಕಳಿಸಿ ಜನತೆಗೆ ಮೋಸ ಮಾಡುವ ದೊಡ್ಡ ಜಾಲವಿದ್ದು, ಇಂತಹ ನಯವಂಚಕರಿಂದ ಜಾಗೃತಿ ಮೂಡಿಸುವದಕ್ಕಾಗಿಯೇ ವಿಜಯಪುರ ನಗರ ಶಾಸಕರು ಹಾಗೂ ಸಿದ್ಧಸಿರಿ ಸೌಹಾರ್ದ ಸಹಕಾರಿ ಸಂಘ ನಿ. ಅಧ್ಯಕ್ಷ ಬಸನಗೌಡ ಪಾಟೀಲ ಯತ್ನಾಳ ಅವರ ನಿರ್ದೇಶನದಂತೆ ರಾಜ್ಯಾದ್ಯಂತ ಸಿದ್ಧಸಿರಿ ಸೌಹಾರ್ದ ಸಹಕಾರಿಯು ಗ್ರಾಹಕರ ಸಭೆ ಮೂಲಕ ಗ್ರಾಹಕರಲ್ಲಿ ಜಾಗೃತಿ ಮೂಡಿಸುವ ಮಹತ್ಕಾರ್ಯ ಮಾಡುತ್ತಿದೆ ಎಂದು ಸಿದ್ಧಸಿರಿ ಸೌಹಾರ್ದ ಸಹಕಾರಿ ಸಂಘ ನಿ. ಜಂಟಿ ವ್ಯವಸ್ಥಾಪಕ ನಿರ್ದೇಶಕ ರಾಘವ ಅಣ್ಣಿಗೇರಿ ತಿಳಿಸಿದರು. ಸಿಂದಗಿ ಪಟ್ಟಣದ ಸಿದ್ಧಸಿರಿ ಸೌಹಾರ್ದ ಸಹಕಾರಿ ಸಂಘ ನಿ. ಶಾಖೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಗ್ರಾಹಕರ ಸಭೆಯಲ್ಲಿ ಮಾತನಾಡಿದ ಅವರು, ಪ್ರಸ್ತುತ ಸಿದ್ಧಸಿರಿ ಸೌಹಾರ್ದ ಸಹಕಾರಿ ಸಂಘ ನಿ. ಸಿದ್ಧಸಿರಿಯ ಠೇವಣಿ ರೂ. 3,500 ಕೋಟಿ, ಸಾಲ ಹಾಗೂ ಮುಂಗಡಗಳು ರೂ. 2,400 ಕೋಟಿ, ಶೇರು ಸಂಗ್ರಹ ರೂ.55 ಕೋಟಿ, ದುಡಿಯುವ ಬಂಡವಾಳ ರೂ. 3,600 ಕೋಟಿ ಹೊಂದಿದ್ದು, ರಾಜ್ಯಾದ್ಯಂತ 159 ಶಾಖೆಗಳು, 1080 ಸಿಬ್ಬಂದಿಗಳು, 593 ಪಿಗ್ಮಿ ಸಂಗ್ರಹಕಾರರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು. ಯಾವುದೇ ಬ್ಯಾಂಕ್, ಸೊಸೈಟಿಗಳು, ಸೌಹಾರ್ದಗಳಲ್ಲಿ ಖಾತೆ ಹೊಂದಿರುವ ಗ್ರಾಹಕರು ತಪ್ಪದೆ ಪ್ರತಿ ವ್ಯವಹಾರದ ಬಳಿಕ ಪಾಸಬುದಲ್ಲಿ ಮುದ್ರಿಸಿಕೊಳ್ಳಬೇಕು. ಸಿಬ್ಬಂದಿ ಮುದ್ರಿಸಲು ನಿರಾಕರಿಸಿದರೆ, ತಕ್ಷಣ ಹಿರಿಯ ಅಧಿಕಾರಿಗಳಿಗೆ ದೂರು ನೀಡಬೇಕು. ಪ್ರತಿ ವ್ಯವಹಾರದ ಸಂದೇಶ ಮೊಬೈಲ್ ಬರುವಂತೆ ನೋಡಿಕೊಳ್ಳಬೇಕು. ಠೇವಣಿ ತುಂಬಿದ ತಕ್ಷಣ ಠೇವಣಿ ಪತ್ರ, ರಸೀದಿ ಪಡೆಯಬೇಕು. ಪಿಗ್ಮಿ ಹಣದ ಬಗ್ಗೆಯೂ ಖಚಿತಪಡಿಸಿಕೊಳ್ಳಿ. ಖಾಲಿ ಚೆಕ್, ವಿತ್ ಡ್ರಾ ರಸೀದಿಗಳಲ್ಲಿ ಸಹಿ ಮಾಡಿ ನೀಡಬಾರದು ಎಂದು ಸಲಹೆ ನೀಡಿದರು. ವಂಚಕರಿಂದ ಆರ್‌ಬಿಐ, ಐಟಿ ಇಲಾಖೆ, ಪೊಲೀಸ್ ಇಲಾಖೆ, ಏರಪೋರ್ಟ ಕಸ್ಟಮ್ ಕಚೇರಿ, ಪಾರ್ಸಲ್ ಆಫೀಸ್ ಎಂದು ಹೇಳಿಕೊಂಡು ಕರೆ ಅಥವಾ ತಮ್ಮ ಮೊಬೈಲ್ ನಂಬರ್ ಲಾಟರಿ ಸ್ಕೀನ್ ವಂಚನೆಗೆ ಮೋಸ ಹೋಗದೆ ಜಾಗೃತರಾಗಿರಿ: ಅಣ್ಣಿಗೇರಿನಲ್ಲಿ ಆಯ್ಕೆಯಾಗಿದೆ ಎಂದು, ತಮಗೆ ಲಾಟರಿ ಹತ್ತಿದೆ ಎಂದು ಸುಳ್ಳು ಹೇಳಿ ಮುಗ್ಧ ಜನತೆಯನ್ನು ವಂಚಿಸುವ ಪ್ರಕರಣಗಳು ಬೆಳಕಿಗೆ ಬಂದಿವೆ. ಇಂತಹ ಯಾವುದೇ ಕರೆಗಳಿಗೆ, ವ್ಯಕ್ತಿಗಳಿಗೆ ಕಿವಿಗೊಡದೆ ಜಾಗ್ರತರಾಗಿರಬೇಕು. ಓಟಿಪಿ ಸಂ–ಖ್ಯೆ ಯಾವುದೇ ಕಾರಣಕ್ಕೂ ಶೇರ್ ಮಾಡಬೇಡಿ ಎಂದು ಕಿವಿಮಾತು ಹೇಳಿದರು. ಈ ಸಂದರ್ಭದಲ್ಲಿ ಸಿದ್ಧಸಿರಿ ಮಹಾ ಪ್ರಬಂಧಕಿ ಉಮಾದೇವಿ ಹಿರೇಮಠ, ವಕೀಲರ ಸಂಘದ ಅಧ್ಯಕ್ಷ ಎಸ್.ಬಿ. ಪಾಟೀಲ, ವೆಂಕಟೇಶ ಗುತ್ತೇದಾರ, ಶಫಿ ಅಹಮದ್ ಬಿಜಾಪುರ, ಮುಖ್ಯೋಪಾಧ್ಯಾಯರಾದ ರತ್ನಾಬಾಯಿ ನಾಗಾವಿ, ಜಗದೇವಿ ನಂದಿಕೋಲ, ರವಿ ಪಾಟೀಲ, ಸಿದ್ದನಗೌಡ ಬೋರಾವತ, ಧರೆಪ್ಪ ಬಿರಾದಾರ, ಸಂದೀಪ ಗುಡೂರ, ಯೋಗೇಶ ಹಳ್ಳಿ, ಪವನ ಕುಲಕರ್ಣಿ ಮತ್ತಿತರರು ಉಪಸ್ಥಿತರಿದ್ದರು.

# ದುರ್ಗಮ್ಮನ ಹುಂಡಿಯಲ್ಲಿ 43 ಲಕ್ಷ ರೂ ಸಂಗ್ರಹ



ಬಳ್ಳಾರಿ:– ಕಳೆದ ನಾಲ್ಕನೇ ತಿಂಗಳಲ್ಲಿ ಇಲ್ಲಿನ ದುರ್ಗಮ್ಮ ದೇವಸ್ಥಾನದ ಐದು ಹುಂಡಿಗಳಲ್ಲಿ 43 ಲಕ್ಷದ 44 ಸಾವಿರದ 260 ನಗದು ಮತ್ತು 3 ಕಿಲೋ 400 ಗ್ರಾಂ ಬೆಳ್ಳಿ ಸಾಮಾನು ಮತ್ತು 85.900 ಮಿಲಿ ಚಿನ್ನ ಸಂಗ್ರಹವಾಗಿದ್ದನ್ನು ಎಣಿಕೆ ಮಾಡಿದೆಂದು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಹನುಂತಪ್ಪ ಅವರು ತಿಳಿಸಿದ್ದಾರೆ.

# ಶೀಘ್ರ ಫಲಾನುಭವಿಗಳಿಗೆ ಗ್ಯಾರಂಟಿ ಹಣ

ಬಳ್ಳಾರಿ:–

ಸದ್ಯದಲ್ಲೇ ಕಳೆದ ಜೂನ್ ತಿಂಗಳ ಗೃಹ ಲಕ್ಷ್ಮಿ ಯೋಜನೆಯ ಹಣ ಬರಲಿದೆ. ಆಗಲೇ ಡಿಬಿಟಿ ಮಾಡಲು ಹಣ ಮಂಜೂರು ಮಾಡಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ. ಅವರು ಇಂದು ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡುತ್ತ. ಈ ಯೋಜನೆಗೆ ಕಳೆದ ಮೇ ತಿಂಗಳು ಆರಂಭದಲ್ಲೇ ಹಣ ನೀಡಿತ್ತು ಈಗ ಒಂದು ತಿಂಗಳದ್ದು ಬಾಕಿ ಇದೆ. ಸದ್ಯದಲ್ಲೇ ಅವರವರ ಖಾತೆಗಳಿಗೆ ಹಣ ಸಂದಾಯವಾಗಲಿ ಎಂದು ಹೇಳಿದರು. ಅಂಗನವಾಡಿ ಕೇಂದ್ರಗಳಿಗೆ ಮೊಟ್ಟೆ ವಿತರಣೆ ಹಣ ಸರ್ಕಾರ ನೀಡಲು ವಿಳಂಬವಾಗುವುದಕ್ಕೆ ನಾನಾ ಕಾರಣಗಳಿವೆ. ಈ ಕುರಿತು ಹಣಕಾಸು ಇಲಾಖೆಯೊಂದಿಗೆ ಮಾತುಕತೆ



ಮಾಡಿ ವಿಭಾಗವಾರು ಯಾವುದೇ ಆರೋಪಗಳು ಕೇಳಿಬರದಂತೆ ಟೆ–ಂಡರ್ ಕರೆಯಲಾಗಿದೆ. ಸಧ್ಯದಲ್ಲೇ ಅಂಗನವಾಡಿಗಳಿಗೆ ಮೊಟ್ಟೆ ಸರಬರಾಜು ಆಗಲಿದೆಂದರು. ನಾನು ಪಕ್ಷದ ಶಿಸ್ತಿನ ಸಿಪಾಯಿ. ಪಕ್ಷ, ಹೈಕಮಾಂಡ್ ಏನು ಹೇಳುತ್ತೆ ಅದನ್ನು ಕೇಳುವೆ ಎಂದರು. ಅಂಗನವಾಡಿ ಹೆಸರು ಬದಲಾವಣೆ ಬಗ್ಗೆ ನಿರ್ಧರಿಸಿದೆ. ಈ ಬಗ್ಗೆ ಚರ್ಚೆ ನಡೆದಿದೆ. ಸರಿಯಾದ ನಿರ್ಧಾರ ತೆಗೆದುಕೊಳ್ಳಲಿದೆಂದ ಅವರು ಅಂಗನವಾಡಿ ಕೇಂದ್ರಗಳಲ್ಲಿಎಲ್ ಕೆಜ ಯುಕೆಜಿ ಆರಂಭಿಸುವ ಬಗ್ಗೆ ಸಿಎಂ ಅವರ ಜೊತೆ ಮಾತನಾಡಿರುವೆ. ಪದವಿ, ಸ್ನಾತಕೋತ್ತರ ಪದವಿ ಪಡೆದವರು ಅಂಗನವಾಡಿ ಕಾರ್ಯಕರ್ತರಿದ್ದಾರೆ. ಅವರು ಮಕ್ಕಳಿಗೆ ಆಂಗ್ಲ ಭಾಷೆ ಭೋದಿಸಲು ಸಮರ್ಥರಿದ್ದಾರೆ ಎಂಬುದನ್ನು ಸಿಎಂ ಗಮನಕ್ಕೆ ತಂದಿದೆ.ಈ ಬಗ್ಗೆ ಶಿಕ್ಷಣ ಇಲಾಖೆ, ನಮ್ಮ ಇಲಾಖೆ ಚರ್ಚೆ ನಡೆಸಿದೆ. ಗುಣಮಟ್ಟದ ಶಿಕ್ಷಣ, ಸದೃಢ ಮಕ್ಕಳನ್ನು ನಿರ್ಮಿಸುವುದೇ ನಮ್ಮ ಗುರಿಯಾಗಿದೆ.ಯಾವುದೇ ಕಾರಣ–ಕ್ಕೆ ಅಂಗನವಾಡಿಗಳನ್ನು ಮುಚ್ಚುವುದಿಲ್ಲ ಎಂದರು. ಎಸ್ಸಿ, ಎಸ್ಟಿ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಕುರಿತ ಬಿಜೆಪಿಯವರ ಆಕ್ಷೇಪಕ್ಕೆ ಉತ್ತರಿಸಿ. ಗ್ಯಾರೆಂಟಿ ಯೋಜನೆಗಳಲ್ಲೂ ಎಸ್ಸಿ ಎಸ್ಟಿ ಜನರಿದ್ದಾರೆ.

ಅವರಿಗೆ ಈ ಅನುದಾನ ಬಳಕೆಯಾಗುತ್ತೆ ಎಂದ ಅವರು. ಬಿಜೆಪಿಯವರ ಪ್ರತಿಯೊಂದು ಆರೋಪಕ್ಕೆ ಉತ್ತರ ಕೊಡಲು ಆಗಲ್ಲ. ಅವರ ಅವಧಿಯಲ್ಲಿ ಎಸ್ಸಿ, ಎಸ್ಟಿ ಸಮುದಾಯ ಅಭಿವೃದ್ಧಿಗೆ ಎಷ್ಟು ಅನುದಾನ ಮೀಸಲಿಟ್ಟಿದ್ದಾರೆ ಎಂಬುವುದನ್ನು ತಿಳಿಸಲಿ ಎಂದರು. ಮುಡಾ ಅಕ್ರಮ ಬಗ್ಗೆ ನನಗೆ ಗೊತ್ತಿಲ್ಲ. ಜಿಲ್ಲೆಯಲ್ಲಿ ಸತೀಶ್ ಜಾರಕಿಹೊಳಿ, ಲಕ್ಷ್ಮಣ ಸವದಿ ಅವರು ಹಿರಿಯ ನಾಯಕರಾಗಿದ್ದು, ಎಲ್ಲರೂ ಒಗ್ಗಟ್ಟಾಗಿದ್ದೇವೆ. ಈಗಾಗಲೇ ಅವರೊಂದಿಗೆ ಮಾತನಾಡಲಾಗಿದೆ. ಏನೆ ಸಮಸ್ಯೆ ಇದ್ದರೂ ಪಕ್ಷದ ಚೌಕಟ್ಟಿನಲ್ಲಿ ಕುಳಿತು ಬಗೆಹರಿಸಿಕೊಳ್ಳುತ್ತೇವೆ ಎಂದರು.

# ಶುದ್ಧ ನೀರಿಗಾಗಿ ಪಟ್ಟಣ ಪಂಚಾಯಿತಿಗೆ ಮನವಿ



ಮೊಳಕಾಲ್ಮೂರು:–

ಪಟ್ಟಣದ ಹೆಚ್. ಆರ್. ರಸ್ತೆಯ ಉತ್ತರ ಭಾಗದಲ್ಲಿ ಬರುವ 2,3,4,5 ನೇ ವಾರ್ಡಿನಲ್ಲಿ ವಾಸಿಸುವ ಜನರು ಶುದ್ಧ ನೀರಿಗಾಗಿ ಪರಿ ತಪ್ಪಿಸುವ ಸ್ಥಿತಿ ನಿರ್ಮಾಣವಾಗಿದ್ದು, ಪರಿಹಾರಕ್ಕಾಗಿ ಪಟ್ಟಣ ಪಂಚಾಯಿತಿ ಅಧಿಕಾರಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷರಾದ ಡಾ. ಪಿ. ಎಂ. ಮಂಜುನಾಥ ಮಾತನಾಡಿ, ಪಟ್ಟಣದ ಹೆಚ್. ಆರ್. ರಸ್ತೆಯ ಉತ್ತರ ಭಾಗದಲ್ಲಿ ಅಂದರೆ, ಹಳೆ ಪಟ್ಟಣದ ವ್ಯಾಪ್ತಿಗೆ ಬರುವ 2,3,4,5 ನೇ ವಾರ್ಡನ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಸುಮಾರು ವರ್ಷಗಳಿಂದ ನಿರಂತರವಾಗಿ ಇದ್ದು, ಇದನ್ನು ಸರಿಪಡಿಸಲು ಪಟ್ಟಣ ಪಂಚಾಯಿತಿ ವಿಫಲವಾಗಿದ್ದು ಈ ವಾರ್ಡ್ ಗಳ ಜನರ ನೀರಿನ ಸಮಸ್ಯೆ ಬಗೆಹರಿಸಲು ಆಗುತ್ತಿಲ್ಲ. ರಂಗಯ್ಯನದುರ್ಗ ಜಲಾಶಯದಿಂದ ಸರಬರಾಜು ಆಗುವ ನೀರು ಗುಣಮಟ್ಟದ್ದು ಆಗಿರದೆ, ಕಲುಷಿತವಾಗಿದೆ. ಜನರು ಕುಡಿಯಲು ,ಬಳಸಲು ಯೋಗ್ಯವಲ್ಲ ದಷ್ಟು ವಿಘರಿತವಾಗಿದೆ. ಆ ನೀರನ್ನು ಸಹ 15–20 ದಿವಸಗಳಿಗೊಮ್ಮೆ ಸರಬರಾಜು ಮಾಡಲಾಗುತ್ತಿದೆ ಇದರಿಂದ ಜನರಿಗೆ ತುಂಬ ತೊಂದರೆಯಾಗುತ್ತಿದೆ ಇದರ ಪರಿಹಾರಕ್ಕಾಗಿ ಕೊಳವೆ ಬಾವಿ ಕೊರೆಸುವ ಯತ್ನಗಳು ನಡೆಯುತ್ತಿಲ್ಲ. ಇದನ್ನರಿತ ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿಗಳು ಅದಷ್ಟು ಬೇಗ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ತಿಳಿಸಿ ಪಟ್ಟಣ ಪಂಚಾಯಿತಿ ಮುಖ್ಯ ಅಧಿಕಾರಿ ಲಿಂಗರಾಜು ರವರಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪ ಪಂ ಸದಸ್ಯರಾದ ರೂಪ ವಿನಯ್ ಕುಮಾರ್, ಶುಭಾ ಪೃಥ್ವಿರಾಜು, ಎಚ್. ಟಿ. ಜಯರಾಮ್, ಎಚ್. ನರಸಿಂಹ, ಕಿರಣ್ ಗಾಯಕ್ವಾಡ್, ತಿಪ್ಪೇರುದ್ರಗೌಡ, ಡೀಸ್ ರಾಜು, ಹೇಮಾವತಿ, ನಾಗರತ್ನ, ವೀಣಾ, ತಿಪ್ಪೇಸ್ವಾಮಿ, ಲಕ್ಷ್ಮೀ ಸರಸ್ವತಿ ತಿಪ್ಪಮ್ಮ,ಗಂಗಮ್ಮ, ಇನ್ನು ಮುಂತಾದವರಿದ್ದರು.

# ಕಂಟೋನ್ಮೆಂಟ್ ಲಯನ್ಸ್ ಕ್ಲಬ್ ಪದಾಧಿಕಾರಿಗಳ ಪದಗ್ರಹಣ



ಬಳ್ಳಾರಿ:–

ಬಳ್ಳಾರಿಯ ಲಯನ್ಸ್ ಕ್ಲಬ್ ಕಂಟೋನ್ಮೆಂಟ್ಸ್ ನೂತನ ಅಧ್ಯಕ್ಷರಾಗಿ ರಾಜೇಶ್ ಎಂ.ಪಿ, ಕಾರ್ಯದರ್ಶಿಗಳಾಗಿ ಜಿ ಶ್ರೀನಿವಾಸ ರೆಡ್ಡಿ ,ಕೋಶಾಧಿಕಾರಿಯಾಗಿ ಸೂರಜಮಲ್ ಏಕಗ್ರೀವವಾಗಿ ಆಯ್ಕೆಯಾಗಿದ್ದಾರೆ. ಲಯನ್ಸ್ ಕ್ಲಬ್ ಆವರಣದಲ್ಲಿ ನಡೆದ ಸಮಾರಂಭದಲ್ಲಿ 2024–25 ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ನಡೆಯಿತು. ಇನ್ಸ್ಟಾಲೇಶನ್ ಆಫೀಸರ್ ಗುರುರಾಜ್ ಬಹದ್ದೂರ್ ಜೋನಲ್ ಚೇರ್ ಪರ್ಸನ್ ರಾಜಶೇಖರ್ ಲಯನ್ಸ್ ಕ್ಲಬ್ ನ ಚಟುವಟಿಕೆಗಳ ಬಗ್ಗೆ ಮಾತನಾಡಿದರು ಮುಖ್ಯ ಅತಿಥಿಯಾಗಿ ಬಿಐಟಿಎಂ ಎಂಬಿಎ ಹೆಚ್‌ಡಿ ಡಾಕ್ಟರ್ ಜ್ಯೋತಿ ಡಿಸೋಜಾ ಮಾತನಾಡಿ ಲಯನ್ಸ್ ಕ್ಲಬ್ ಸೇವೆಗಳನ್ನು ಸಮಾಜಮುಖಿ ಕಾರ್ಯಗಳನ್ನುಪ್ರಶಂಶಿಸಿದರು. ಸೀನಿಯರ್ ಲಯನ್ ಮೆಂಬರ್ ರಾಧಾಕೃಷ್ಣನ್ ಕ್ಲಬ್ಬಿನ ಸೇವೆಗಳನ್ನು ವಿವರಿಸಿದರು ಈ ಕಾರ್ಯಕ್ರಮದಲ್ಲಿ ಲಯನ್ಸ್ ಕ್ಲಬ್ಬಿನ ಸದಸ್ಯರಾದ ಸೆಂತಿಲ್ ಕುಮಾರ್ ಶ್ರೀಲತಾ ರಾವ್, ಜವೇರಿಲಾಲ್, ಭರತ್, ಸುಧಾಕರ್ ಆ ಔ ನೂತನ ಸದಸ್ಯರಾಗಿ ನಾಗರಾಜ ರೆಡ್ಡಿ, ಶಂಕರ್, ವೆಂಕಟೇಶ್, ಶಿವಕುಮಾರ್ ಸೇರಿದ್ದಾರೆ, ಅಧ್ಯಕ್ಷರಾದ ರಾಜೇಶ್ ಸ್ವಾಗತವನ್ನು ಕೋರಿದರು, ಮುಖ್ಯ ಅತಿಥಿಗಳ ಪರಿಚಯ ಹಾಗೂ ವಂದನಾರ್ಪಣೆಯನ್ನು ಕಾರ್ಯದರ್ಶಿಗಳಾದ ಶ್ರೀನಿವಾಸ ರೆಡ್ಡಿ ನೆರವೇರಿಸಿದರು.

# ಒಂದೇ ದಿನ ತುಂಗಭದ್ರೆಗೆ 5 ಟಿಎಂಸಿ ನೀರು

ಹೊಸಪೇಟೆ:–

ವರುಣಾರ್ಭಟ ಮುಂದುವರೆದ ಹಿನ್ನೆಲೆಯಲ್ಲಿ ತುಂಗಭದ್ರೆಗೆ ಒಂದೇ ದಿನ 5 ಟಿಎಂಸಿ ನೀರು ಸಂಗ್ರಹವಾಗಿದೆ.

ಕಳೆದೆರಡು ದಿನಗಳಿಂದ ತುಂಗಭದ್ರೆಗೆ ನೀರು ಪ್ರವಾಹ ರೀತಿಯಲ್ಲಿ ಹರಿದು ಬರುತ್ತಿದ್ದು ಇದ್ದಕ್ಕಿಂದತೇ 20 ಸಾವಿರ, 25ಸಾವಿರ ಕ್ಯೂಸೆಕ್ ನೀರು ಇಂದು 45ಸಾವಿರ ಗಡಿ ದಾಟಿ–ದ್ದು ಶನಿವಾರ ರಾತ್ರಿಯ ವರೆಗೂ ಕಳೆದ 24ಗಂಟೆಯಲ್ಲಿ 50ಸಾವಿರಕ್ಕೂ ದಾಟಿದ್ದು ತುಂಗಭದ್ರೆಯ ಒಡಲು ತುಂಬಲಾರಂಭವಾಗಿದೆ. ಇದರೊಂದಿಗೆ ಶನಿವಾರ ಸಂಗ್ರಹವಾದ ಸಾಮಥ್ಯ 13 ಟಿಎಂಸಿ ಯಿಂದ 18 ಟಿಎಂಸಿ ವೃದ್ಧಿಯಾದಂತಾಗದೆ.

**ದಾಖಲಾದ ನೀರಿನ ಮಟ್ಟ:** ತುಂಗಭದ್ರಾ ಜಲಶಯದ ನೀರಿನ ಮಟ್ಟ 1633 ಅಡಿ ಇದ್ದು ಸದ್ಯ 1597.31 ಅಡಿಇದೆ. ಒಟ್ಟು ನೀರು ಸಂಗ್ರಹಣಾ ಸಮಥ್ಯ 105.788 ಟಿಎಂಸಿ ಸದ್ಯ 18.249 ಟಿಎಂಸಿ ಸಂಗ್ರಹವಾಗಿದೆ. ಕಳೆದ 24 ಗಂಟೆಗಳಿಂದ ಜಲಾಶ ಯ–ಕ್ಕೆ 50715 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು 263 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಕಳೆದ ವರ್ಷಕ್ಕೆ ಹೋಲಿಕೆ ಮಾಡಲಾಗಿ ಅವಧಿಗೆ ಮುಂಚೆಯೇ ಜಲಾಶಯ ಭರ್ತಿಯಾಗುವ ಸೂಚನೆಗಳಂತು ಕಾಣಲಾರಂಭವಾಗಿದ್ದು ಜುಲೈ ಅಂತ್ಯಕ್ಕೆ ಜಲಾಶಯ ಭರ್ತಿಯಾದರೂ ಅಚ್ಚ–ರಿಯೇ ಇಲ್ಲಾ ಈ ಸೂಚನೆಗಳಿಂದ ತುಂಗಭದ್ರಾ ಜಲಾಶಯ ನಂಬಿದ ಜನ ಜಾನುವಾರು ಸೇರಿದಂತೆ ರೈತರು ಹರ್ಷಿತರಾಗಿದ್ದಾರೆ. ಶನಿವಾರವಾಗಿದ್ದರಿಂದ ನಿನ್ನೆ ಹಾಗೂ ಇಂದು ಭಾನುವಾರವಾಗಿರುವುದರಿಂದ ಜನ ಸಾಗರ ಜಲಾಶಯಕ್ಕೆ ಹರಿದುಬರುವ ನಿರೀಕ್ಷೆ ಇದೆ.

# ಲಿಖಿತ ಮೌಖಿಕವಾಗಿ ವಿದ್ಯಾರ್ಥಿ ಕಲಿಕಾ ಮಟ್ಟ ಪರಿಶೀಲನೆ

ಬಳ್ಳಾರಿ:–

ಪ್ರತಿ ಮಗುವಿನ ಕಲಿಕಾ ಮಟ್ಟವನ್ನು ಮೌಖಿಕ ಹಾಗೂ ಲಿಖಿತವಾಗಿ ಮುಖಾಮುಖಿ ಪರಿಶೀಲಿಸಿ, ಪ್ರಗತಿಕಂಡ–ರೆ ಪ್ರಶಂಸಿಸಿ,ನ್ಯೂನತೆ ಕಂಡುಬಂದ ಲ್ಲಿ ಸಲಹೆ ಸೂಚನೆ ಹಾಗೂ ಮಾರ್ಗ ದರ್ಶನ ಮಾಡುತ್ತಿರುವುದು ಮಕ್ಕಳ ಗುಣಾತ್ಮಕ ಶಿಕ್ಷಣದ ಮೇಲೆ ಉತ್ತಮ ಪರಿಣಾಮ ಬೀರುತ್ತದೆ ಎಂದು ಕರ್ನಾಟಕ ರಾಜ್ಯ ಕ್ರಿಯಾಶೀಲ ಶಿಕ್ಷಕರ ವೇದಿಕೆ ಬಳ್ಳಾರಿ ಜಿಲ್ಲಾ ಘಟಕದ ಅಧ್ಯಕ್ಷ ರವಿ ಚೇಳ್ಳಗುರ್ಕಿ ಅಭಿಪ್ರಾಯ ಪಟ್ಟರು. ತಾಲೂಕಿನ ಸಂಜೀವರಾಯನಕೋಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನಾಲ್ಕನೇ, ಆರನೇ ಹಾಗೂ ಎಂಟನೇ ತರಗತಿ ಮಕ್ಕಳ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಸಾಮರ್ಥ್ಯವನ್ನು ಮೌಲ್ಯಾಂಕನ ಮಾಡಲು ಬಂದ ತಂಡವನ್ನು ಮಕ್ಕಳ ಸಮ್ಮುಖದಲ್ಲಿ ಪ್ರಾರ್ಥನೆಯಲ್ಲೇ ಸ್ವಾಗತಿಸಿ ಮಾತನಾಡಿದ ಅವರು ಈಗ ನಡೆಯುತ್ತಿರುವುದು ಮೊದಲನೇ ಹಂತ,ನವೆಂಬರ್ ತಿಂಗಳಲ್ಲಿ ಎರಡನೇ ಹಂತ ಹಾಗೂ ಮಾರ್ಚ್ ತಿಂಗಳಲ್ಲಿ ಮೂರನೇ ಹಂತ.ಹೀಗೆ ಮೂರು ಹಂತಗಳಲ್ಲಿ ನಡೆಯುವುದರಿಂದ ಹಂತದಿಂದ ಹಂತಕ್ಕೆ ಮಕ್ಕಳ ಶೈಕ್ಷಣಿಕ ಪ್ರಗತಿ ಉತ್ತಮಗೊಳ್ಳಬೇಕು. ಶಿಕ್ಷಕರು ಮೌಲ್ಯಮಾಪನ ತಂಡ ನೀಡಿದ ಸಲಹೆ ಸೂಚನೆಗಳನ್ನು ತಪ್ಪದೆ ಪಾಲಿಸಬೇಕು. ಪ್ರಗತಿ ಸಾಧಿಸಿ ಬೇಕು.

ಪ್ರತಿ ಮಗುವಿಗು ಓದಲು, ಬರೆಯಲು ಹಾಗೂ ಸರಳ ಲೆಕ್ಕಗಳನ್ನು ಮಾಡವಂತೆ ಸಮರ್ಥರನ್ನಾಗಿ ತಯಾರಿ ಮಾಡಬೇಕಾದಂತಹ ಗುರುತರ ಜವಾಬ್ದಾರಿ ನಿಮ್ಮ ಮೇಲಿದೆ.ಪೋಷಕರ ನಿರೀಕ್ಷೆಗ ಳನ್ನು ಈಡೇರಿಸುವ ಪ್ರಯತ್ನ ಮಾಡಬೇಕೆಂದು ಕಿವಿಮಾತು ಹೇಳಿದರು. ಅಂದ್ರಾಳ್ ಸಿ.ಆರ್. ಪಿ.ಕೇಶವರೆಡ್ಡಿ, ಕಮ್ಮರಚೇಡು ಶಾಲೆಯ ಟಿ.ಜಿ.ಟಿ ಶಿಕ್ಷಕರಾದ ಶಿವಮೂರ್ತಿ, ಎತ್ತಿನ ಬೂದಿಹಾಳ್ ಶಾಲೆಯ ಶಿಕ್ಷಕ ರಾದ ರಾಮಕೃಷ್ಣ, ಕುಬೇರ ಮೌಲ್ಯ ಮಾಪನ ಮಾಡಿದರು.

Editor:S.K.Wadeyar, #69 "VISPATHI", B,Block S.O.G. Colony Davanagere-577005,Karnataka.
Publisher:S.K.Wadeyar, #69 "VISPATHI", B,Block S.O.G. Colony Davanagere-577005,Karnataka.
Printer:S.K.Wadeyar, SUCHITHRA PRINTERs & PUBLISHERs # 69 "VISPATHI",B,Block S.O.G.Colony Davanagere-577005,Karnataka
Owner:S.K.Wadeyar, #69 "VISPATHI", B,Block S.O.G.Colony, Davanagere-577005,Karnataka